ಉಳಿದವನ್ನು ಕೆಲಸಕ್ಕೆ ಬಾರದವು ಎಂಬುದಾಗಿ ಮುಚ್ಚಲಾಗಿದೆ. ಈ ಮಕ್ಕಳು ಕಾಂಪೌಂಡೊಳಗೆ ಅಥವಾ ವರಾಂಡದಲ್ಲಿ ಕುಳಿತು ಸ್ನಾನ ಮಾಡಬೇಕಾಗಿದೆ ಅಡಿಗೆ ಮನೆಯಂತೂ ಒಂದೇ ಕೊಠಡಿಯಲ್ಲಿದ್ದು ೨ ವಿದ್ಯಾರ್ಥಿನಿಲಯಗಳಿಗೆ ಸಂಬಂಧಿಸಿದಂತೆ ಅಡಿಗೆ ಮಾಡುವುದರಿಂದ ಹೊಗೆ ಸಹ ಹೊರಗೆ ಹೋಗದೆ ಉಸಿರು ಕಟ್ಟಿಸುವಂತೆ ಇದೆ. ಈ ವಿದ್ಯಾರ್ಥಿನಿಲಯಗಳ ವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರಿಗಳು ಅನೇಕ ವರ್ಷಗಳಿಂದಲೂ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದಾರೂ ಪರಿಸ್ಥಿತಿ ಇನ್ನೂ ಹಾಗೆಯೇ ಇದೆ. ಮಾನ ಮರ್ಯಾದೆಯಿಂದ ಬದುಕಬೇಕೆಂಬ ಈ ಹೆಣ್ಣು ಮಕ್ಕಳ ಪರಿಸ್ಥಿತಿ ಶೋಚನೀಯವಾಗಿದೆ. ಈ ವಿದ್ಯಾರ್ಥಿ ನಿಲಯದ ಸುಧಾರಣೆಗೆ ಸಮಾಜ ಕಲ್ಯಾಣ ಮಂತ್ರಿಗಳು ಕೂಡಲೇ ಕ್ರಮ ಕೈಕೊಳ್ಳಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಉತ್ತರ ತರಿಸಿಕೊಡುತ್ತೇನೆ.

ಉಪಾಧ್ಯಕ್ಷರು.—ಶ್ರೀ. ಪೆಚ್. ಪಾಟೀಲ್.—ಗೈರು ಹಾಜರಿ.

16. ಅಂಕೋಲ ನಗರದಲ್ಲಿ ಸಾರಾಯಿ ಅಂಗಡಿಗಳಿಂದ ಸಾರ್ವಜನಿಕರಿಗೆ ತೊಂದರೆ ಯಾಗಿರುವುದು.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೆ, ಅಂಕೋಲಾ ನಗರದಲ್ಲಿ ಐದು ಸಾರಾಯಿ ಅಂಗಡಿಗಳು ಸಾರ್ವಜನಿಕರಿಗೆ ತೊಂದರೆಯಾಗುವಂತಹ ಆಕ್ಷೇಪಾರ್ಹ ಸ್ಥಳದಲ್ಲಿವೆ ಎಂದು ತಿಳಿದು ಬಂದಿದೆ. ಸದರಿ ಅಂಗಡಿಗಳನ್ನು ಸ್ಥಳಾಂತರಿಸಲು ಸಾರ್ವಜನಿಕರಿಂದಲೇ ಅಲ್ಲದೆ. ಉತ್ತರಕನ್ನಡ ಜಿಲ್ಲೆಯ ಯುವ ಕಾಂಗ್ರೆಸ್ ಅಧ್ಯಕ್ಷ ಅರುಣ ನಾಡಕರ್ಣಿಯವರಿಂದ ಅಬಕಾರಿ ಅಧೀಕ್ಷಕರ ಕಚೇರಿ, ಕಾರವಾರ ಇವರಿಗೆ ದೂರುಗಳನ್ನು ಕಳುಹಿಸಲಾಗಿದೆ. ಆದರೆ ಅಬಕಾರಿ ಕಮೀಷನರ್ ಸುತ್ತೋಲೆ ನಂಬರ್ ಈಎಕ್ಸ್‌ಇ. ೧೭೭. ಐಎಂಎಲ್ (೧) ೮೭, ದಿನಾಂಕ ೬-೧೧-೧೯೮೭ರ ಪ್ರಕಾರ ಯಾವುದೇ ಮದ್ಯದಂಗಡಿಗಳನ್ನು ಅನುಜ್ಞಾಪನ ಪತ್ರದ ಅವಧಿ ನಡುವೆ ಸ್ಥಳಾಂತರಿಸಲು ತಡೆ ಇದೆ ಎಂದು ತಿಳಿಸಿದರು. ಈ ಉತ್ತರದಿಂದ ಅಸಮಾಧಾನಗೊಂಡವರು, ಉಚ್ಚನ್ಯಾಯಾಲಯಕ್ಕಾಗಲೀ, ಲೋಕಾಯುಕ್ತಕ್ಕಾಗಲಿ, ಸಾರ್ವಜನಿಕ ಹಿತದೃಷ್ಟಿಯಿಂದ ದೂರು ನೀಡುವ ಬಗ್ಗೆ, ಕೆಲವು ಕಾಗದ ಪತ್ರಗಳ ನಕಲು ಕೊಡುವಂತೆ ಅಬಕಾರಿ ಅಧೀಕ್ಷಕರವರ ಕಚೇರಿಗೆ ಬರೆದಿದ್ದಕ್ಕೆ ಅಧಿಕೃತ ರಹಸ್ಯ ಕಾಯಿದೆ ಪ್ರಕಾರ ಕಾಗದಪತ್ರಗಳನ್ನು ಕೊಡಲು ಬರುವುದಿಲ್ಲ ಎಂದು ತಿಳಿಸಲಾಗಿದೆ. ಸಾರ್ವಜನಿಕರ ಹಿತಕ್ಕಿಂತ, ಗುತ್ತಿಗೆದಾರರ ಹಿತವೇ ಮುಖ್ಯ ಎಂದು ಉತ್ತರ ಕನ್ನಡ ಜಿಲ್ಲೆಯ ಅಬಕಾರಿ ಅಧೀಕ್ಷಕರು ಭಾವಿಸಿರುವುದು ಇವರಿಂದ ವ್ಯಕ್ತವಾಗುತ್ತದೆ. ಸಾರ್ವಜನಿಕರಿಗೆ ತೊಂದರೆಯಾಗುವಂಥ ಸ್ಥಳದಲ್ಲಿ ಮದ್ಯದಂಗಡಿ ನಡೆಸಲು ಅನುಮತಿ ನೀಡಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಿ, ಸದರಿ ಅಂಗಡಿಗಳನ್ನು ಮುಚ್ಚುವಂತೆ ಆಜ್ಞೆ ಹೊರಡಿಸಬೇಕೆಂದು ಸರಕಾರವನ್ನು ಒತ್ತಾಯಿಸಿ, ಈ ಬಗ್ಗೆ ಸದನದಲ್ಲಿ ಹೇಳಿಕೆ ನೀಡಬೇಕೆಂದು ಮಾನ್ಯ ಅಬಕಾರಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ. ಅವರಿಂದ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಅಧಿಕಾರಿಗಳಿಗೆ ಫೋನಿನಲ್ಲಿ ಕೇಳುವುದಕ್ಕಾಗುವುದಿಲ್ಲವೆ ? ಮಕ್ಕಳ ಕೈನಲ್ಲಿ ಕನ್ನಡ ಭಾಷೆ ಓದಿಸಿದಂತೆ ನಮ್ಮ ಕೈಯಲ್ಲಿ ಏತಕ್ಕೆ ಓದಿಸುತ್ತಾರೆ ?

ಖಾಸಗೀ ನಿರ್ಣಯ

ಲೆಜಿಸ್ಲೇಟರ್ಸ್ ಪವರ್ಸ್, ಪ್ರಿವಿಲೇಜಸ್ ಮತ್ತು ಇಮ್ಯೂನಿಟಿ ಬಿಲ್ ಬಗ್ಗೆ

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಉಪಾಧ್ಯಕ್ಷರೆ, ನಿನ್ನೆ ನಾವೊಂದು ರೆಸಲ್ಯೂಷನ್ ಕಳುಹಿಸಿ ಕೊಟ್ಟಿದ್ದೇವೆ. ನಮ್ಮ ಉಪನಾಯಕರು ಕೂಡ ಪ್ರಸ್ತಾಪ ಮಾಡಿದ್ದರು. ಶಾಸಕರುಗಳಿಗೆ ಸಂಬಂಧ ಪಟ್ಟ ಪ್ರಿವಿಲೇಜಿಸ್ ಬಿಲ್ ಏನಿದೆ. ಅದನ್ನು ನಾವು ಶಾಸನ ಸಭೆಗೆ ಬಹಿಷ್ಕಾರ ಹಾಕಿದ ಸಂದರ್ಭದಲ್ಲಿ ಪಾಸು ಮಾಡಿಕೊಂಡಿದ್ದಾರೆ.

ಉಪಾಧ್ಯಕ್ಷರು.—ಅಧ್ಯಕ್ಷರು, ಅವರ ಕೊಠಡಿಯಲ್ಲಿದ್ದಾರೆ, ನಿಮ್ಮ ನಾಯಕರು ಕೂಡ ಹೋಗಿರಬಹುದಂ...

ಶ್ರೀ ಎಸ್. ಬಂಗಾರಪ್ಪ.—ನಮ್ಮ ನಾಯಕರು ಕೂಡ ಸಿಸಿಲಿ ಆದ ಕೂಡಲೇ ವಿಷಯ ತೆಗೆದು ಕೊಳ್ಳೋಣ ಎಂದು ಹೇಳಿದ್ದರು.

ಉಪಾಧ್ಯಕ್ಷರು.—ನೀವು ಕೊಟ್ಟ ಸೂಚನೆ ಪರಿಶೀಲನೆಯಲ್ಲಿರುವುದರಿಂದ, ಅಧ್ಯಕ್ಷರು ಬಂದ ಮೇಲೆ ಪ್ರಸ್ತಾಪ ಮಾಡುವುದು ಒಳ್ಳೆಯದು.

SRI S. BANGARAPPA —It is an hanging sword on the members always. ಈಗ ತಂದಿರುವ ವಂಸೂದೆ ಸಂವಿಧಾನಕ್ಕೆ ವಿರೋಧವಾಗಿದೆ.

ಉಪಾಧ್ಯಕ್ಷರು.—ಅದರ ಮೆರಿಟ್ಸ್ ಬಗ್ಗೆ ಮಾತನಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೆ, ನಮ್ಮ ಪಕ್ಷದ ವತಿಯಿಂದ ನಾವು ಒಂದು ರೆಸಲ್ಯೂಷನ್ ಕೊಟ್ಟಿದ್ದೇವೆ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ಹೇಳಿದರೆ ಸಾಕು.

ಉಪಾಧ್ಯಕ್ಷರು.—ನಿಖರವಾಗಿ ಈ ಸಂದರ್ಭ ಎಂದು ಹೇಳಲಿಕ್ಕೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಕಾರ್ಯಾಲಯದಲ್ಲಿ ನಾವು ಕೊಟ್ಟಿರುವುದನ್ನು ಹಾಗೆ ಇಟ್ಟು ಕೊಳ್ಳುವುದು ಸರಿಯಲ್ಲ.

ಉಪಾಧ್ಯಕ್ಷರು.—ತಾವು ಕೊಟ್ಟಿರುವುದು ಅವರ ಕಡೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಒಟ್ಟಿನಲ್ಲಿ ನಾವು ಕೊಟ್ಟಿದ್ದೇವೆ ತಾವು ಉಪಾಧ್ಯಕ್ಷರಾದರೂ ಕೂಡ ಆ ಸ್ಥಾನದಲ್ಲಿ ಕುಳಿತ ಮೇಲೆ ಸಂಪೂರ್ಣ ಅಧಿಕಾರ ತಮಗೆ ಇದೆ.

ಉಪಾಧ್ಯಕ್ಷರು.—ಮಾನ್ಯ ಅಧ್ಯಕ್ಷರು ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ. ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ, ಅವರು ಅದರ ಬಗ್ಗೆ ಸಮಾಲೋಚನೆ ಮಾಡುತ್ತಿರಬಹುದು ಎಂದು ನನ್ನ ಭಾವನೆ. ತಾವು ಅವರ ಕಡೆ ಹೋಗಿ ವಿಚಾರಿಸುವುದು ಒಳ್ಳೆಯದು. ಮಾನ್ಯ ಪಾರ್ಲಿಯವರು ಕೂಡ ಅಧ್ಯಕ್ಷರ ಕಡೆ ಹೋಗಿರಬೇಕೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅವರು ಏನು ಮಾತನಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನನ್ನು ಕರೆಯದೇ ನಾನು ಹೋಗುವುದಿಲ್ಲ. ಈಗ ಅಧ್ಯಕ್ಷರು, ಮಾನ್ಯ ಪಾರ್ಲಿಯವರನ್ನು ಏತಕ್ಕೆ ಕರೆಯಿಸಿದ್ದಾರೋ ನನಗೆ ಗೊತ್ತಿಲ್ಲ. ಇವೊತ್ತು ನಿಯಮ ಸಿಸಿಲಿ ಆದಮೇಲೆ ನಮ್ಮ ವಿಚಾರವನ್ನು ವಿಚಾರ ಮಾಡೋಣ ಎಂದು ಹೇಳಿದ್ದರು, ಅವರು ಪರ್‌ಮಿಷನ್ ಕೊಡುತ್ತೇನೆಂದು ಹೇಳಲಿಲ್ಲ ಅದನ್ನು ಒಪ್ಪುತ್ತೇನೆ, ಈಗ ನಾವು ಏನು ಮಾಡಬೇಕು ಎನ್ನುವ ಬಗ್ಗೆ ತಾವು ವಿಚಾರ ತಿಳಿಸಿದರೆ, ಒಳ್ಳೆಯದು, ಅದರಿಂದ ನಮಗೆ ಸಂತೋಷವಾಗುತ್ತದೆ.

ಉಪಾಧ್ಯಕ್ಷರು.—ಈಗ ತಮ್ಮ ಸಂತೋಷಕ್ಕೆ ನಾನು ಋಣಿ, ಮಾನ್ಯ ಸದಸ್ಯರು ಭಾಷಣ ಮುಂದುವರಿಸಲಿಕ್ಕೆ ಅವಕಾಶ ಮಾಡಿಕೊಟ್ಟರೆ ಇನ್ನೂ ಋಣಿ.

ಶ್ರೀ ಎಂ. ರಘುಪತಿ.—ಮಾನ್ಯ ಪಾರ್ಲಿಯವರು ಅಧ್ಯಕ್ಷರ ಕಡೆ ಹೋಗಿರಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಘುಪತಿಯವರೇ, ಅಧ್ಯಕ್ಷರು ತಮ್ಮನ್ನು ಏನಾದರೂ ಕರೆಸಿದ್ದಾರೆಯೇ ? ಈ ವಿಷಯದ ಬಗ್ಗೆ ತಮ್ಮ ಬಳಿ ಚರ್ಚೆ ಮಾಡಿದ್ದಾರೆಯೇ ? ಚರ್ಚೆ ಮಾಡಿದ್ದರೆ ತಿಳಿಸಬೇಕು. ಮಾನ್ಯ ಉಪಾಧ್ಯಕ್ಷರೆ, ನಾವು ಈ ಸೂಚನೆಯನ್ನು ಕೊಟ್ಟು ಮೂರು ದಿವಸ ವಾಗಿದೆ. ಆ ರೀತಿ ನಾವು ಕಳುಹಿಸಿಕೊಟ್ಟ ಮೇಲೆ ನಾವು ಪ್ರಸ್ತಾಪ ಮಾಡದೇ ಹಾಗೆಯೇ ಕುಳಿತು ಕೊಳ್ಳುವುದಕ್ಕೆ ಆಗುವುದಿಲ್ಲ.

ಉಪಾಧ್ಯಕ್ಷರು.— ಅಧ್ಯಕ್ಷರು, ತಮ್ಮ ಸ್ಥಾನಕ್ಕೆ ಬಂದಾಗ ಈ ವಿಷಯವನ್ನು ತಾವು ಪ್ರಸ್ತಾಪ ಮಾಡಿದರೆ ಅವರು ಅವಕಾಶ ಮಾಡಿಕೊಡಬಹುದು. ಈಗ ಮಾನ್ಯ ವೆಂಕಟರಾಮಯ್ಯನವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವೆಂಕಟರಾಮಯ್ಯನವರು ಮಾತನಾಡುವಾಗ ವಚ್ಛೆ ಬಾಯಿ ಹಾಕುವುದಿಲ್ಲ. ತಮ್ಮ ಅನುಮತಿಯನ್ನು ಪಡೆದು ಕೇಳುತ್ತಿದ್ದೇವೆ. ನಾವು ಕೊಟ್ಟು ಪಂಥರಂ ದಿವಸ ಆದರೂ ಇನ್ನೂ ಏನೂ ತಿಳಿಸಿಲ್ಲ. ಪದೇ ಪದೇ ಈ ವಿಷಯವನ್ನು ಎತ್ತಿದರೂ ಉತ್ತರ ಇಲ್ಲ. ನಾವು ಏತಕ್ಕೋಸ್ಕರ ಸೂಚನೆಗಳನ್ನು ಕಳುಹಿಸುತ್ತೇವೆ. ನಮ್ಮ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ತೀರ್ಮಾನ ಹೇಳಿ. ತಾವು ಈ ವಿಚಾರ ಪ್ರಸ್ತಾಪ ಮಾಡುವುದು ಬೇಡ ಎಂದು ಹೇಳಿ.

ಉಪಾಧ್ಯಕ್ಷರು.— ನನ್ನ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ,— ಮಾನ್ಯ ಉಪಾಧ್ಯಕ್ಷರೇ, ನಿಮ್ಮ ಪರಿಸ್ಥಿತಿ ಚೆನ್ನಾಗಿಯೇ ಇದೆ. ಹಿಂದಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ವ್ಯತ್ಯಾಸ ಕಾಣುತ್ತಿದೆ. ನಿಮ್ಮ ಪರಿಸ್ಥಿತಿ ಹೈಕ್ಲಾಸ್ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ — ಈ ಪರಿಸ್ಥಿತಿ ವ್ಯತ್ಯಾಸ ಎನ್ನುವ ಬಗ್ಗೆ ನಾನು ಸ್ವಲ್ಪ ಮಾತನಾಡಬೇಕೆಂದು ಇದ್ದೆ.

ಉಪಾಧ್ಯಕ್ಷರು. — ಅಧ್ಯಕ್ಷರು ತಮ್ಮ ಸ್ಥಾನಕ್ಕೆ ಬಂದಾಗ ತಾವು ಪ್ರಸ್ತಾಪ ಮಾಡಿ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಉಪಾಧ್ಯಕ್ಷರೇ, ತಾವು ಅಧ್ಯಕ್ಷರ ಸ್ಥಾನದಲ್ಲಿ ಕುಳಿತ ಮೇಲೆ ತಾವು ನಮಗೆ ತಿಳಿಸಲೇ ಬೇಕು ಎಂದು ನಮ್ಮ ನಂಬಿಕೆ ನಿಮ್ಮನ್ನು ನಾವು ನಂಬಿದೇ ನಾವು ಯಾರನ್ನು ನಂಬಬೇಕು ?

ಉಪಾಧ್ಯಕ್ಷರು.— ತಾವು ಕಳುಹಿಸಿರುವಂತಾದ್ದು ಅಧ್ಯಕ್ಷರ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಮಾನ್ಯ ಉಪಾಧ್ಯಕ್ಷರೇ, ನಿಯಮ ೩೩೪ ಆದಮೇಲೆ ಈ ವಿಷಯ ತೆಗೆದುಕೊಳ್ಳುತ್ತೇವೆಂದು ಹೇಳಿದಾಗ ಅಧ್ಯಕ್ಷರು ನೋಡೋಣ ಎಂದು ಹೇಳಿದರು. ಈಗ ನಾನು ಅಧ್ಯಕ್ಷರ ಬಳಿ ಹೋಗಿದ್ದೆ ಅವರು ಏನು ಹೇಳಿದರು ಎಂದರೆ, ಮಾನ್ಯ ಮುಖ್ಯ ಮಂತ್ರಿಗಳು ಬರುತ್ತಾರೆ ಅವರು ಬಂದ ಮೇಲೆ ತೆಗೆದುಕೊಳ್ಳೋಣ ಎಂದು ಅದಕ್ಕೆ ನಾನು ಈ ಸಬ್ಜೆಕ್ಟ್ ಮೇಲೆ ನಾವು ರೈಸ್ ಮಾಡಿಯೇ ಮಾಡುತ್ತೇವೆಂದು ಹೇಳಿ ಬಂದೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಉಪಾಧ್ಯಕ್ಷರೇ ಆದ್ದರಿಂದ, ನಾವು ಈಗ ರೈಸ್ ಮಾಡುತ್ತಿದ್ದೇವೆ ಮಾನ್ಯ ಅಧ್ಯಕ್ಷರು ಮಾನ್ಯ ಖಾರ್ಗೆಯವರ ಕಡೆ ಏನು ಹೇಳಿದ್ದಾರೆ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಿ ಹೇಳುತ್ತೇನೆಂದು ಹೇಳಿದ್ದಾರೆ.

ಶ್ರೀ ಎಂ. ರಘುಪತಿ, — ಲೀಡರ್ ಆಫ್ ದಿ ಹೌಸ್ ಜೊತೆ ಡಿಸ್ಕಸ್ಸ್ ಮಾಡಿದನಂತರವೇ ಯಾವುದೇ ಒಂದು ವಿಚಾರದ ಬಗ್ಗೆ ಡೇಟನ್ನು ಫಿಕ್ಸ್ ಮಾಡಬೇಕೆಂದು ಒಂದು ನಿಯಮ ಇದೆ.

ಶ್ರೀ ಎಸ್. ಬಂಗಾರಪ್ಪ.— ಕೆಲವು ಸಾರಿ ಕಾರ್ಯ ಕಲಾಪಗಳ ಸಮಿತಿಯ ಸಭೆಯ ಮುಂದೆ ಬಂದಾಗಲೂ ಇದು ಬರುತ್ತದೆ

ಶ್ರೀ ಬಿ. ಬಸವಲಿಂಗಪ್ಪ.— ಈಗ ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ಬಂದರು . ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಸ್ವಾಮಿ, ೨೧ನೇ ತಾರೀಖು ನಾವು ಒಂದು ನೋಟೀಸನ್ನು ಕೊಟ್ಟಿದ್ದೇವೆ. ಅದು ಪವರ್ಸ್, ಪ್ರಿವಿಲೇಜಸ್, ಇಮ್ಯುನಿಟಿ ಮತ್ತು ಫ್ರೀಡಂ ಆಫ್ ಪ್ರೆಸ್ ಬಿಲ್ ಬಗ್ಗೆ. ಇದನ್ನು ನಾವು ಕೊಟ್ಟಾಗ ನಾಳೆ ಇದನ್ನು ತೆಗೆದುಕೊಳ್ಳೋಣ ಎಂದು ಮಾನ್ಯ ಅಧ್ಯಕ್ಷರು ಹೇಳಿದರು. ನಿನ್ನೆಯ ದಿವಸ ಭಾರತದ ಮಾನ್ಯ ರಾಷ್ಟ್ರಪತಿಗಳು ಬಂದಿದ್ದರಿಂದ ಅದು ಪೋಸ್ಟ್‌ಪೋನ್ ಆಯಿತು. ಇವತ್ತು ನಾವು ಅದನ್ನು ರೈಸ್ ಮಾಡಿದಾಗ ಮಾನ್ಯ ಅಧ್ಯಕ್ಷರು ಏನು ಕೇಳಿ ಹೇಳಿದರು ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಬರಲಿ, ಇದನ್ನು ಯಾವರೀತಿ ಮಾಡೋಣ ಎಂದು ಹೇಳುತ್ತೇನೆಂದರು. ಆ ಬಿಲ್ಸ್‌ಗಳ ಬಗ್ಗೆ ರಾಜ್ಯದ ಮೂಲೆ ಮೂಲೆಗಳಿಂದ ಟೀಕೆ ಟಿಪ್ಪಣಿಗಳು ಬರುತ್ತಿವೆ. ಇದು ನಮ್ಮ ಹಕ್ಕು. ಆದರೆ ಇದರಲ್ಲಿ ನಮ್ಮ ಹಕ್ಕನ್ನು ಪೊಟಕರ ಮಾಡತಕ್ಕ ವಿಚಾರ ಇದೆ...

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.— ಅವರು ಏನು ನೋಟೀಸನ್ನು ಕೊಟ್ಟಿದ್ದಾರೆ ಅದರ ಬಗ್ಗೆ ನಿಮ್ಮನ್ನು ಕೇಳಿ ಅನಂತರ ತಮಗೆ ತಿಳಿಸುತ್ತೇನೆಂದು ನಾನು ನಿನ್ನೆ ಹೇಳಿದ್ದೆ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೆ, ಈ ಸಭೆಯು ಮುಂದಿಟ್ಟಿರತಕ್ಕ ಈ ಒಂದು ಬಿಲ್‌ನ ವಿಚಾರದಲ್ಲಿ ಯಾವುದೇ ರೀತಿಯ ಮೋಷನ್‌ನ್ನೂ ತರತಕ್ಕದ್ದು ಸೂಕ್ತವಲ್ಲ, ಇದನ್ನು ರಿಜೆಕ್ಟ್ ಮಾಡಬಹುದು ಅಥವಾ ಒಂದೇ ಒಂದು ಸಾಧ್ಯತೆ ಏನೆಂದರೆ ಈ ಬಿಲ್‌ನ್ನು ಸಾರ್ವಜನಿಕರ ಅಭಿಪ್ರಾಯಂ ಕ್ಯಾಗಿ ಸರ್ಕ್ಯೂಲೇಟ್ ಮಾಡಿ ಎಂದು ಹೇಳಬಹುದು. ಈಗ ನಾವು ಇದನ್ನು ಚರ್ಚೆಗೆ ತೆಗೆದುಕೊಂಡಿಲ್ಲ. ಈ ಬಿಲ್ಲನ್ನು ನಾವು ಸಭೆಯ ಮುಂದೆ ಮಂಡಿಸಿದ ಉದ್ದೇಶ ಏನೆಂದರೆ ಇದರ ಬಗ್ಗೆ ರಾಷ್ಟ್ರವ್ಯಾಪ್ತ ಚರ್ಚೆಯಾಗಲಿ ಎನ್ನುವುದು. ನಮಗೆ ಸ್ವಾತಂತ್ರ್ಯ ಬಂದ ಮೇಲೆ ಮೊದಲನೆಯ ಸಾರಿ ಈ ಒಂದು ಬಿಲ್ಲನ್ನು ಈ ಸಭೆಯ ಮುಂದೆ ನಾವು ತಂದಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.— ಇದರ ಅವಶ್ಯಕತೆ ಏನಿತ್ತು ?

ಶ್ರೀ ರಾಮಕೃಷ್ಣ ಹೆಗಡೆ.— ಪ್ರಿವಿಲೇಜಸ್‌ನ್ನು ಕೋಡಿಫೈ ಮಾಡಬೇಕೆಂಬ ವಿಚಾರದಲ್ಲಿ ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ, ಇದರ ಅವಶ್ಯಕತೆ ಇದೆಯೆಂದು ನನ್ನ ಭಾವನೆ. ಇದು ಬೇಡವೆಂದು ತಾವು ಹೇಳುವುದಾದರೆ ಇದನ್ನು ತಮ್ಮ ತಲೆಯ ಮೇಲೆ ಹೊರಿಸುವುದಿಲ್ಲ. ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಲ್ಲಿ ಡಾ. ಅಂಬೇಡ್ಕರ್‌ರವರು ಹೇಳಿದ್ದಾರೆ ಈ ಕೋಡಿಫೈ ಮಾಡುವ ಕೆಲಸವನ್ನು ಇವತ್ತು ಮಾಡದಿದ್ದರೂ ನಾಳೆಯಾದರೂ ಇವರು ಮಾಡಲೇಬೇಕಾಗುತ್ತದೆಂದು. ಇದನ್ನು ಮಾಡುವುದು ಸಾಧ್ಯವಾದರೆಂದು ಎಂದೂ ಅವರು ಹೇಳಿದ್ದಾರೆ. ನಮಗೆ ಇವತ್ತು ಪ್ರತಿಯೊಂದಕ್ಕೂ ಹೌಸ್ ಆಫ್ ಕಾಮನ್ಸ್ ಏನಿದೆ ಅದೇ ಆಧಾರ ಇವತ್ತು ನಮಗೆ ಏನು ಪ್ರಿವಿಲೇಜಸ್ ಇವೆ, ರೈಟ್ಸ್ ಇವೆ ಅದು ಲೆಜಿಸ್ಲೇಚರ್ ಇರಬಹುದು ಅಥವಾ ಪಾರ್ಲಿಮೆಂಟ್ ಇರಬಹುದು, ಅಲ್ಲಿ ಏನೇನು ಹಕ್ಕುಗಳಿವೆ ಅವೆಲ್ಲದಕ್ಕೂ ಆಧಾರ ಎಂದರೆ ಹೌಸ್ ಆಫ್ ಕಾಮನ್ಸ್. ಅಲ್ಲಿ ಯಾವ ಯಾವ ಪ್ರಿವಿಲೇಜಸ್ ಇವೆ ಅವೇ ನಮಗೆ ಆಧಾರ ನಾವು ಗುಲಾಮಗಿರಿಯಿಂದ ಬಿಡುಗಡೆಯಾಗಿದ್ದರೂ ಕೂಡ ನಮ್ಮ ಪ್ರಿವಿಲೇಜಸ್ ಏನಿದೆ ಎಂಬುದನ್ನು ಹೇಳತಕ್ಕ ಕೆಲಸವನ್ನು ನಾವು ಮಾಡಿಲ್ಲ. ನಮಗೆ ಇರತಕ್ಕ ಆಧಾರ ಎಂದರೆ ಹೌಸ್ ಆಫ್ ಕಾಮನ್ಸ್ ಈ ವಿಧೇಯಕವನ್ನು ಇವತ್ತೇ ಪಾಸ್ ಮಾಡಬೇಕು, ನಾಳೆಯೇ ಪಾಸ್ ಮಾಡಬೇಕೂ ಅಥವಾ ಈ ವರ್ಷವೇ ಪಾಸ್ ಮಾಡಬೇಕೆಂದು ಏನೂ ಇಲ್ಲ. ಈ ಬಗ್ಗೆ ರಾಷ್ಟ್ರವ್ಯಾಪ್ತ ಒಂದು ಸೆಮಿನಾರನ್ನು ಬರುವ ಜೂನ್ ಅಥವಾ ಜುಲೈ ತಿಂಗಳಲ್ಲಿ ಮಾಡಬೇಕೆಂದಿದ್ದೇವೆ. ಅಷ್ಟರಲ್ಲಿ ಸಾರ್ವಜನಿಕರ ಅಭಿಪ್ರಾಯ ಬರುತ್ತದೆ. ಆಗ ಈ ಬಿಲ್ಲು ಈ ಮನೆಯಲ್ಲಿ ಪಾಸ್ ಆಗಬೇಕು. ನಂತರ ಮೇಲ್ಮನೆಯಲ್ಲಿ ಪಾಸ್ ಆಗಬೇಕು. ಇದಕ್ಕೆ ಯಾವುದೇ ರೀತಿಯ ಮೋಷನ್ ಬೇಕಾಗಿಲ್ಲ. ಈ ಬಿಲ್‌ನ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಲು ಇದನ್ನು ಸರ್ಕ್ಯೂಲೇಟ್ ಮಾಡಬೇಕೆಂದು ತಾವು ಹೇಳುವುದಾದರೆ ಅದೇ ರೀತಿ ಮಾಡೋಣ ಇದಕ್ಕೂ ನಾನು ತಯಾರಿದ್ದೇನೆ.

ಶ್ರೀ ಪಿ. ಯಂ.

ಅದನ್ನು ಮಾಡಬೇಕು ಮಾಡೋಣ. ಇವತ್ತು ಒಂದು ಉದಾಹರಣೆ ಹೇಳಂತ್ತೇನೆ. ಪ್ರಿವಿಲೇಜ್ ಕಮಿಟಿಗೆ ಎಷ್ಟು ಶಿಕ್ಷೆಯನ್ನು ಕೊಡಬೇಕು ಎನ್ನುವುದಕ್ಕೆ ಮಿತಿ ಇದೆಯೇ ? ಇಲ್ಲ, Convention in House of Commons ಈ ಕನ್‌ವೆನ್‌ಷನ್ ಎಲ್ಲಿದೆ ಕನ್‌ವೆನ್‌ಷನ್‌ನನ್ನು ನಾವು ಬಿಲ್ಡ್ ಮಾಡತ್ತಾ ಹೋಗುತ್ತೇವೆ. ಕನ್‌ವೆನ್‌ಷನ್ ಪ್ರಕಾರ ಒಂದು ದಿವಸ, ಅಥವಾ ಒಂದು ವಾರ, ಹೌಸ್ ಮುಗಿಯುವವರೆಗೆ ಶಿಕ್ಷೆಯನ್ನು ಕೊಡಬಹುದಿತ್ತೋ ಆ ಕನ್‌ವೆನ್‌ಷನ್‌ನನ್ನು ಬದಲಾವಣೆ ಮಾಡಿಕೊಂಡು ಜೋಗಿ ಇವತ್ತು ಆ ಜನ್ಮ ಕಾರಾಗೃಹವಾಸ ಮಾಡಿದರೂ ಕೂಡ ಅದರ ಬಗ್ಗೆ ಚಿಕಾರವೆತ್ತುವಂತಿಲ್ಲ ಇವತ್ತಿನ ಸ್ಥಿತಿಯಲ್ಲಿ. ತಮಿಳುನಾಡು ಅಸೆಂಬ್ಲಿ ಒಳಗೆ ಏನಾಯಿತು ? ಯು. ಪಿ. ಅಸೆಂಬ್ಲಿಯಲ್ಲಿ ಏನಾಯಿತು ? ಆದ್ದರಿಂದ ಇದನ್ನು ಒಂದೇ ಸಲ ಡಿಸ್‌ಮಿಸ್ ಮಾಡುವುದು ಬೇಡ, ಯೋಚನೆ ಮಾಡೋಣ, ಚರ್ಚೆ ಮಾಡೋಣ. ಇದರಲ್ಲಿ ಯಾವರೀತಿ ಬದಲಾವಣೆ ಮಾಡಬೇಕೊ ಆ ರೀತಿಯಲ್ಲಿ ಬದಲಾವಣೆ ಮಾಡೋಣ. ಇದೇ ರೂಪದಲ್ಲಿ ಆಗಬೇಕು. ಇದರಲ್ಲಿ ಒಂದು ಅಕ್ಷರವನ್ನು ಬದಲಾವಣೆ ಮಾಡುವುದುಬೇಡ ಎನ್ನುವ ಹಟವಿಲ್ಲ. ಚರ್ಚೆ ಆಗಲಿ, ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಳ್ಳೋಣ, ಚರ್ಚೆ ಮಾಡೋಣ. ಅದಾದ ಮೇಲೆ ನೋಡೋಣ ನಿಮ್ಮೆಲ್ಲರ ಇಷ್ಟವಿದ್ದರೆ ಪಾಸ್ ಮಾಡೋಣ ಅಷ್ಟೇ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮುಖ್ಯ ಮಂತ್ರಿಗಳನ್ನು ನಾನು ಒಂದು ಪ್ರಶ್ನೆಯನ್ನು ಕೇಳಿದೆ. ಈ ಒಂದು ಮಸೂದೆಯನ್ನ ತರಲಿಕ್ಕೆ ಅವಶ್ಯಕತೆಯಾದರೂ ಏನು ಇತ್ತೆಂದು ? ಅವರು ಅದಕ್ಕೆ ಸಂಕ್ಷಿಪ್ತವಾಗಿ ಉತ್ತರ ಕೊಟ್ಟಿದ್ದಾರೆ. ಹೌಸ್ ಆಫ್ ಕಾಮನ್ಸ್‌ನಲ್ಲಿ ಕಾನ್‌ಸ್ಟಿಟ್ಯೂಷನ್ ಇದೆಯೇ ? ರಾಜ್ಯಾಂಗ ಇದೆಯೇ ? ರಾಜ್ಯಂಗವಿಲ್ಲ. ಅವರು ಅವರ ನಡತೆಯಿಂದಲೇ ಸಂಪ್ರದಾಯವನ್ನು ಕಟ್ಟಿಕೊಂಡು ಬಂದಿದ್ದಾರೆ. ನಮ್ಮನ್ನು ನಮ್ಮ ನಡತೆಯಿಂದ ಕಟ್ಟಿಹಾಕಿ ಹೀಗೆಯೇ ಇರಬೇಕೆಂದು ಹೇಳುವುದು, ಮತ್ತು ಎಲ್ಲರನ್ನು ಜೈಲಿಗೆ ಕಳುಹಿಸಿಕೊಡತಕ್ಕಂಥದ್ದು, ನಾವು ಹೇಳಿದ ಹಾಗೆ ಕೇಳಿದರೆ ಸರಿ ಎಂದು ಹೇಳುವುದು ಈ ಭಾವನೆ ನಿಮಗೆ ಏತಕ್ಕೆ ಬಂದಿತೋ ಏನೋ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲದ್ದೆಲ್ಲ ಏತಕ್ಕೆ ? ಯು. ಕೆ. ಯಲ್ಲಿ ಲಿಖಿತ ಸಂವಿಧಾನವಿಲ್ಲ, ನಮಗೆ ಏತಕ್ಕೆ ಬೇಕು. ನಮಗೂ ಬೇಕಾಗಿಲ್ಲ. ಅವರು ಯಾವರೀತಿ ಸಂಪ್ರದಾಯವನ್ನು ನಡೆಸಿಕೊಂಡು ಬರುತ್ತಿದ್ದಾರೋ ಅದೇ ರೀತಿಯಲ್ಲಿ ನಾವು ಕೂಡ ಇಲ್ಲಿ ನಡೆರಿಕೊಂಡು ಬರುಹುದಾಗಿತ್ತಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮನ್ನು ಏತಕ್ಕೆ ಕಟ್ಟಿಹಾಕುವುದಕ್ಕೆ ಆಲೋಚನೆ ಮಾಡುತ್ತಿದ್ದೀರಿ ಏನು ಕಾರಣ ನಿಮಗೆ ? ಇದುವರೆವಿಗೂ ನಡೆದುಕೊಂಡು ಬಂದಿಲ್ಲವೇ.

ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಎಷ್ಟು ವರ್ಷಗಳಾಯಿತು ? ಸ್ವಾತಂತ್ರ್ಯ ಬಂದವೇಲೆ ದುರ್ನಡತೆ ಅಸೆಂಬ್ಲಿ ಮೆಂಬರ್ಸ್‌ಗೆ ಇದೆಯೇ ? ತಮಗೆ ಆಡಳಿತದಲ್ಲಿರತಕ್ಕಂಥ ಅಧಿಕಾರಿಗಳನ್ನು ಕಟ್ಟಿಹಾಕಲಿಕ್ಕೆ ಆಗಲಿಲ್ಲ. ಅವರನ್ನು ಸ್ಟೈಕ್ ಮಾಡಲಿಕ್ಕೆ ಬಿಟ್ಟಿದ್ದೀರಿ.

ಶ್ರೀ ರಾಮಕೃಷ್ಣಹೆಗಡೆ.—ಒಂದು ಅಂಶ, ಆರ್ಟಿಕಲ್ ೧೯೩ ಕ್ಲಾಸ್ (೩)

> "In other respects the powers, privileges and immunities of a House of the Legislature of a State, and of the members and the Committees of a House of such Legislature, shall be such as may from time to time be defined by the Legislature by law, and, until so defined, those of that House, and of its members and Committees immediately before the coming into force of Section 26 of the Constitution Forty-Fourth Amendment Act, 1978"

ಇದರಲ್ಲಿ ಏನು ತಿಳಿದುಕೊಂಡಿದ್ದೇವೆಂದರೆ...

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಾಂಗದ ವಿಧಿನಿಯಮಗಳನ್ನು ಹೇಳಿದ್ದಾರೆ, ಓದಿದ್ದಾರೆ. ನಾವು ಅವರಿಗೆ ಈ ಅರಿವು ಇಲ್ಲವೆಂದು ತಿಳಿದುಕೊಳ್ಳಲಿಲ್ಲ. ಆದರೆ ಒಂದು ಮಾತನ್ನು ಹೇಳುತ್ತೇನೆ. ಕಾನ್‌ಸ್ಟಿಟ್ಯೂಷನ್‌ನಲ್ಲಿ ಡೈರೆಕ್ಟೀವ್ ಪ್ರಿನ್ಸಿಪಲ್ ಏಷ್ಟು ನಿಯಮಗಳು ಇವೆ ಆಷ್ಟು ನಿಯಮಗಳನ್ನು ಯಾವುದೇ ಸರ್ಕಾರ ಬಂದರೂ ಆ ರೀತಿಯಲ್ಲಿರುವಂತೆ ನಡೆದುಕೊಳ್ಳುತ್ತಿದ್ದಾರೆಯೇ ? ಆರ್ಟಿಕಲ್ ೪೬ರ ಪ್ರಕಾರ ಪ್ರಿವಿಲೇಜನ್ನು ಡಿಫೈನ್ ಮಾಡಬೇಕೆಂದು ನಾವು ಓದಿದ್ದೇವೆ ಮಾಡದೆ ಇದ್ದರೆ ಏನಾಯಿತು ? ಅದು ಮಾಡುವುದರಿಂದ ಏನಾಗುತ್ತದೆಂದು ಯಾರು ಅಧಿಕಾರದಲ್ಲಿರುತ್ತಾರೋ ಮುಖ್ಯಮಂತ್ರಿಗಳೇ ಆಗಲಿ, ಯಾರೇ ಆಗಲಿ ಅವರಿಗೆ ಒಂದು ಅಸ್ತ್ರವನ್ನು ಕೈಯಲ್ಲಿ ಕೊಟ್ಟಂತಾಗುತ್ತದೆ. ಅವರಿಗೆ ಏನು ಬೇಕಾದರೂ ಮಾಡುವುದಕ್ಕೆ ಸ್ವಾತಂತ್ರ್ಯ ಬರುತ್ತದೆ. ಆದ್ದರಿಂದ ನಾವು ನಮ್ಮ ನಡತೆಗಳನ್ನು, ಅನ್ಯೋನ್ಯ ಸಂಬಂಧಗಳನ್ನು ರೂಢಿಸಿಕೊಂಡು ಹೋಗಬೇಕೇ ಹೊರತು ನಡುವಳಿಕೆಗಳನ್ನು. ಮಾತನಾಡುವುದನ್ನು ಕಟ್ಟುನಿಟ್ಟಿಗೆ ಒಳಪಡಿಸುವ ಭಾವನೆ ಸರಿಯಲ್ಲ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ಪುನಃ ಪರಿಶೀಲನೆ ಮಾಡಬೇಕು. ದೇಶದಲ್ಲಿ ವಿಚಾರ ಮಾಡಿಸುತ್ತೇನೆ, ದೇಶದಲ್ಲಿ ಇಲ್ಲದ್ದನ್ನು ನಾನು ಮಾಡುತ್ತೇನೆಂದು ಹೇಳುವ ಭಾವನೆ ಒಳ್ಳೆಯದು. ಅದ್ವಿತೀಯ ಇರಬೇಕು. ಅದ್ವಿತೀಯ ರೀತಿಯಲ್ಲಿ ರಾಜ್ಯವನ್ನು ನಡೆಸಿಕೊಂಡು ಹೋಗಬೇಕೆಂಬ ಬಯಕೆ ಇದೆ, ಸಂತೋಷ ಆದರೆ ಎಲ್ಲಿಯೂ ಮಾಡದೇ ಇರುವುದನ್ನು ನಾನು ಮಾಡುತ್ತೇನೆಂದು ಹೊರಡುವುದು ಸರಿಯೇ ? ಇರತಕ್ಕ ಪ್ರಾವಿಷನ್ ಅನ್ನು ಯಾವ ರೀತಿ ಉಪಯೋಗಿಸಬೇಕೆಂಬುದು ಬೇರೆ ವಿಚಾರ. ನಾವು ಯಾವ ರೀತಿಯಾಗಿ ನಮ್ಮ ನಮ್ಮ ನಡುವಳಿಕೆಯನ್ನು ಭಾವನೆಗಳನ್ನು, ಮಾತುಗಳನ್ನು ಆಡಬೇಕು, ಹೊರಗೆ ಹೋಗತಕ್ಕದ್ದು, ಒಳಗೆ ಬರತಕ್ಕದ್ದು ಇವುಗಳ ಬಗ್ಗೆ ನಮ್ಮಲ್ಲಿ

ಜವಾಬ್ದಾರಿ ಇಟ್ಟುಕೊಂಡು ಯಾವ ರೀತಿ ನಡೆದುಕೊಳ್ಳಬೇಕೆಂಬುದರ ಬಗ್ಗೆ ನಮಗೆ ನಾವೇ ನಿರ್ಬಂಧ ಹಾಕಿಕೊಳ್ಳಬೇಕೇ ಹೊರತು ಕಾನೂನು ತರುವುದು ಸರಿಯಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಇಂಗ್ಲೆಂಡಿನಲ್ಲಿ ಯಾವುದೇ ರೀತಿಯ ರಾಜ್ಯಾಂಗ ಇಲ್ಲದೆ ಅಲ್ಲಿಯ ಆಡಳಿತ ನಡೆದುಕೊಂಡು ಹೋಗುತ್ತಿದೆ. ನಮ್ಮಲ್ಲಿ ರಾಜ್ಯಾಂಗ ಇದ್ದರೂ ಕೂಡ ಆ ಒಂದು ಮಾದರಿಯಲ್ಲಿ ನಡವಳಿಕೆಗಳನ್ನು ರೂಢಿಸಿಕೊಂಡು ಹೋಗಬೇಕೆಂದು ನನ್ನ ಭಾವನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯೋಚನೆ ಮಾಡಲಿ.,

ಅಧ್ಯಕ್ಷರು —ತಿದ್ದುಪಡಿ ಮಾಡುವಾಗ ಯೋಚನೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಆರ್ಟಿಕಲ್ ೧೯೪ ರ ಕ್ಲಾಜ್ ೩ ನ್ನು ತಾವು ಓದಿದಿರಿ. ಅದರಲ್ಲಿ

"shall be such as may from time to time be defined by the Legislature by law, and until so defined, those of that House, and of its members and committees immediately before the coming into force of Section 26 of the Constitution (forty-fourth Amendment) Act, 197-. ಎನ್ನುವುದು ಕೂಡ ಇದೆ, Constitution was writoen and given effect to in the month of January, 1950. At that time it was not defined. ಇದನ್ನು ಡಿಫೈನ್ ಮಾಡಬೇಕೆಂದರೆ ಟೈಂ ನೋಡಿ ಮಾಡಬೇಕು ದಿವಂಗತ ಡಾ॥ ಅಂಬೇಡ್ಕರ್‌ರವರ ಕಾಲದಲ್ಲಿ ಏನು ಒಂದು ಕಮಿಟಿಯನ್ನು ನೇಮಕ ಮಾಡಿದ್ದರು ಅವರು ಈಗ ನಾವು ಡಿಫೈನ್ ಮಾಡುವುದಕ್ಕೆ ಹೋದರೆ ನಾಳೆ ನಾವು ಸಮಾಜಕ್ಕೆ ಡಿಫೈನ್ ಮಾಡುವುದು ಕಷ್ಟವಾಗುತ್ತದೆ, ಅದರ ಫಲಿತಾಂಶ ಕೆಲವೊಮ್ಮೆ ಬೇರೆ ರೂಪದಲ್ಲಿ ಹೋಗಬಹುದೆಂದು ತಡ ಮಾಡಿದರು. ಈಗ ನಮ್ಮ ಮುಂದಿರತಕ್ಕ ಪ್ರಶ್ನೆ ಏನೆಂದರೆ ಅದನ್ನು ಡಿಫೈನ್ ಮಾಡತಕ್ಕ ಕಾಲ ನಮಗೆ ಬಂದಿದೆಯೇ ಎಂಬುದು ಡಿಫೈನ್ ಮಾಡುವುದು ಸ್ಟೇಟ್ ಲೆಜಿಸ್ಲೇಚರ್ ಆಫ್ ಏ ಅಲ್ಲ, ಪಾರ್ಲಿಮೆಂಟ್, ರಾಜ್ಯಸಭೆ ಎಲ್ಲಾ ಮಾಡಬೇಕು. ಅಲ್ಲಿ ರಾಜ್ಯಾಂಗಕ್ಕೆ ತಿದ್ದುಪಡಿಯನ್ನು ತಂದು ಡಿಫೈನ್ ಮಾಡತಕ್ಕ ವಿಚಾರವನ್ನು ತೆಗೆದು ಕೊಳ್ಳಬಹುದಾಗಿತ್ತು. ಲೋಕಸಭೆ ಅಥವಾ ರಾಜ್ಯಸಭೆ ಸದಸ್ಯರುಗಳು ಇವತ್ತಿನ ದಿವಸ ಆ ಒಂದು ವಿಚಾರಕ್ಕೆ ಹೋಗಿಲ್ಲ. ಯಾವ ರಾಜ್ಯಗಳೂ ಕೂಡ ಇದರ ಕಡೆ ಗಮನ ಹರಿಸಿಲ್ಲ. ಗಮನ ಹರಿಸತಕ್ಕ ಸಂದರ್ಭವೂ ಬಂದಿಲ್ಲ. ಕಾಂಗ್ರೆಸ್ ಸರ್ಕಾರವಾಗಲೀ, ಜನತಾ ಸರ್ಕಾರವಾಗಲೀ ಯಾವ ರಾಜ್ಯಗಳಲ್ಲೂ ಇದರ ಬಗ್ಗೆ ವಿಚಾರ ಮಾಡಿಲ್ಲ. ಆರ್ಟಿಕಲ್ ೧೯೪ರ ಬಗ್ಗೆ ಯಾವ ರಾಜ್ಯ ಸರ್ಕಾರಗಳೂ ಯಾವ ಶಾಸನ ಸಭೆಗಳಲ್ಲೂ ಇವತ್ತಿನವರೆಗೆ ಇದನ್ನು ವಿಚಾರ ಮಾಡಲಿಲ್ಲ. ಇದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು ಇದರ ಬಗ್ಗೆ ಪಬ್ಲಿಕ್ ಒಪಿನಿಯನ್ ಸಂಗ್ರಹಿಸುವ ದೃಷ್ಟಿಯಿಂದ ಸರ್ಕ್ಯುಲೇಟ್ ಮಾಡೋಣ ನ್ಯಾಷನಲ್ ಲೆವೆಲ್‌ನಲ್ಲಿ ಚರ್ಚೆ ಮಾಡೋಣ ಎಂದರು, ಆದರೆ ನಮ್ಮ ಮುಂದಿರತಕ್ಕ ಪ್ರಶ್ನೆ ಇಷ್ಟೆ, ಯಾವುದೇ ರಾಜಕೀಯ ಪಕ್ಷದ ಸರ್ಕಾರ ಇರಬಹುದು. ನಿಮ್ಮ ಸರ್ಕಾರ ಇದೆ ಎಂಬ ಪ್ರಶ್ನೆಯಲ್ಲ. ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರತಕ್ಕ ಮಾನ್ಯ ಸದಸ್ಯರು ಇರಬಹುದು ಅವರ ಹಕ್ಕುಗಳ ಪ್ರಶ್ನೆ ಇದೆ. ಇದರಲ್ಲಿ ಅನ್‌ಲಿಮಿಟೆಡ್ ಪವರ್ಸ್ ಇದೆ. ಲೈಫ್ ಇಂಪ್ರಿಸನ್ಮೆಂಟ್ ಕೊಡಬಹುದು. ಶಾಸನಸಭೆಯಲ್ಲಾಗಲೀ ಪ್ರಿವಿಲೇಜ್ ಕಮಿಟಿಯಲ್ಲಾಗಲೀ ಈ ಶಿಕ್ಷೆ ಕೊಡಬಹುದು ಎಂಬ ಅಭಿಪ್ರಾಯ ಹೇಳಿದ್ದೀರಿ. ಯಾವುದೇ ಶಾಸನಸಭೆಗಳನ್ನು ತೆಗೆದುಕೊಂಡರೆ ತಾವು ತಮಿಳುನಾಡು ಮತ್ತು ಉತ್ತರ ಪ್ರದೇಶವನ್ನು ಉದಾಹರಿಸಿ ಹೇಳಿದಿರಿ, ಅದಾಗಿರಬಹುದು, ಪಶ್ಚಿಮ ಬಂಗಾಳ ಆಗಿರಬಹುದು, ಮತ್ತೆಬೇರೆ ಬೇರೆ ರಾಜ್ಯಗಳ ಶಾಸನಸಭೆಗಳಾಗಿರಬಹುದು, ಪಾರ್ಲಿಮೆಂಟ್ ಆಗಿರಬಹುದು ಅಲ್ಲಿ ನಡೆದಿರತಕ್ಕ ಘಟನೆಗಳನ್ನು ವಿಚಾರ ಮಾಡಿದರೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಏನೇನು ನಡೆದಿದೆ ಅದಕ್ಕಿಂತ ಹೆಚ್ಚಾಗಿ ನಮ್ಮ ದೇಶದಲ್ಲಿ ನಡೆದಿಲ್ಲ. ಇಂಥ ಸಂದರ್ಭದಲ್ಲಿ ಕೂಡ even in England Rights and privileges have not codified. ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಕೂಡ ಕೋಡಿಫೈ ಮಾಡುವ ಪ್ರಯತ್ನ ಮಾಡಿಲ್ಲ. ನಮಗಿರತಕ್ಕ ಅಧಿಕಾರದಲ್ಲಿ ಪ್ರಿವಿಲೇಜ್ ಕಮಿಟಿಯಲ್ಲಿರಬಹುದು, ಅಥವಾ ಹೌಸ್ ಡಿಸಿಷನ್ ತೆಗೆದು ಕೊಂಡಾಗ ಇರಬಹುದು ಯಾವುದೇ ಸಂದರ್ಭದಲ್ಲಿ ತಪ್ಪಿತಸ್ಥ ವ್ಯಕ್ತಿಗೆ ಭಾರಿ ದೊಡ್ಡ ಶಿಕ್ಷೆ ಕೊಡಬೇಕು ಎಂದು ಮಾಡಿಲ್ಲ. ಸಂದರ್ಭಕ್ಕೆ ತಕ್ಕಹಾಗೆ ಎಷ್ಟು ಬೇಕೋ ಅಷ್ಟು ಮಾತ್ರ ಮಾಡಿದ್ದೇವೆಯೇ ವಿನಹ

ಯಾವುದೇ ತಿರ್ಮಾನ ಮಾಡಿದರೂ ತೂಕವಾಗಿ ಮಾಡಿದ್ದೇವೆ, ಯಾವುದೇ ಸಂದರ್ಭದಲ್ಲಿ ನಮ್ಮ ಜೌಸ್ ತಪ್ಪಾಗಿ ತೀರ್ಮಾನ ಮಾಡಿದೆ ಎಂದು ಸಾರ್ವಜನಿಕರಿಂದ ಅಭಿಪ್ರಾಯ ಬಂದಿಲ್ಲ. ಇಲ್ಲಿ ಎಷ್ಟು ದಂಡ ಹಾಕಿದ್ದೀರಿ ? ೫ ಸಾವಿರ ರೂಪಾಯಿಯಿಂದ ೫೦ ಸಾವಿರ ರೂಪಾಯಿವರೆಗೆ ದಂಡ ಹಾಕುವುದಕ್ಕೆ ಅವಕಾಶ ಇದೆ. ಮತ್ತು ೬ ತಿಂಗಳವರೆಗೆ ಶಿಕ್ಷೆ ಕೊಡುವುದಕ್ಕೆ...

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಅರ್ಥವಾಗುವುದಿಲ್ಲ. ಇದರಲ್ಲೇ ಕಾಲ ಕಳೆಯಬೇಕು ಅಂದರೆ ಅದಂ ಬೇರೆ ವಿಚಾರ. ಈಗಿರುವುದೇ ಫೈನಲ್ ಅಲ್ಲ. ೫ ಸಾವಿರ ರೂಪಾಯಿ ಬದಲು ೫ ರೂಪಾಯಿ ಹಾಕಿ. ಚರ್ಚೆಗೆ ಇದು ಓಪನ್ ಆಗಿದೆ.

ಶ್ರೀ ಎಸ್. ಬಂಗಾರಪ್ಪ —ಒಪ್ಪುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಶಿಕ್ಷೆ ೫ ವರ್ಷ ಬೇಡ ಎಂದರೆ ೫ ತಿಂಗಳು ಹಾಕಿ.

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುವುದನ್ನು ತಾವು ಅಲಿಸಿದರೆ ಅರ್ಥವಾಗುತ್ತದೆ,

ಅಧ್ಯಕ್ಷರು.—ಈಗ ಡಿಸ್ಕಷನ್ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಜೀವ ಶಿಕ್ಷೆ ಕೊಡತಕ್ಕ ಸಂದರ್ಭ ಇದೆ. ಹಾಗಿರಬಾರದು ಎಂಬ ಅಭಿಪ್ರಾಯ ಕೊಟ್ಟು ಮಾತನಾಡಿದರೆ ಸರಿ. ನಮ್ಮ ಮುಂದಿರತಕ್ಕ ಪ್ರಶ್ನೆ

ಶ್ರೀ ಎಸ್. ಬಂಗಾರಪ್ಪ.—ಅಜೀವ ಶಿಕ್ಷೆ ಕೊಡತಕ್ಕ ಸಂದರ್ಭ ಇದೆ, ಹಾಗಿರಬಾರದು ಎಂಬ ಅಭಿಪ್ರಾಯ ಕೊಟ್ಟು ಮಾತನಾಡಿದರೆ ಸರಿ. ನಮ್ಮ ಮುಂದಿರತಕ್ಕ ಪ್ರಶ್ನೆ ಈಗಿನತಕ್ಕ ಅಧಿಕಾರದ ದುರುಪಯೋಗವನ್ನು ಸದನವಾಗಲೀ ಸದನದ ಸಮಿತಿಯಾಗಲೀ ಯಾವುದೇ ಸಂದರ್ಭದಲ್ಲಿ ಮಾಡಿಲ್ಲ. ಪದೇಪದೇ ಈ ಮಾತನ್ನು ಹೇಳುತ್ತಿದ್ದೇನೆ. ಅವ್ಯವಹಾರದಿಂದ ಇದನ್ನು ಕೋಡಿಫೈ ಮಾಡತಕ್ಕ ಅವಶ್ಯಕತೆ ಇಲ್ಲ ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯ. ಇನ್ನೊಂದು ವಿಷಯ ಹೇಳಿದ್ದೀರಿ. ಪಬ್ಲಿಕ್ ಒಪಿನಿಯನ್ ಎಲಿಸಿಟ್ ಮಾಡಬೇಕು, ನ್ಯಾಷನಲ್ ಡಿಬೇಟ್ ಮಾಡಬೇಕು ಎಂದು. Far reaching consequences or effect ಇರುವ ಬಿಲ್ಲನ್ನು ನಿಮ್ಮ ಪಕ್ಷದಲ್ಲೂ ಚರ್ಚೆ ಮಾಡಿಲ್ಲ. ಡೆಮಾಕ್ರಟಿಕ್ ಪ್ರೊಸೆಸ್‌ನಲ್ಲಿ ಇಂಥ ಮುಖ್ಯವಾದ ಬಿಲ್ಲನ್ನು ಚರ್ಚೆ ಮಾಡಬೇಕಾಗಿತ್ತು. ಅದು ನಿಮಗೆ ಟ್ರಿಗುವ ವಿಚಾರ, ಈ ಸದನದ ಮುಂದೆ ತರುವ ಮೊದಲು ನಿಮ್ಮ ಪಕ್ಷದಲ್ಲಿ ಚರ್ಚೆ ಮಾಡತಕ್ಕ ಸೌಜನ್ಯವನ್ನೂ ಕೂಡ ತಾವು ಇಟ್ಟುಕೊಂಡಿಲ್ಲ. ಅದೇನೂ ಮಾಡದೇ ಒಂದೇ ಸಾರಿಗೆ ಬಿಲ್ಲನ್ನು ತಂದು without having recourse to such steps, just like a bolt from the blue...

ಅಧ್ಯಕ್ಷರು.—ಅದಿನ್ನೂ ಕನ್‌ಸಿಡರೇಷನ್‌ಗೆ ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಂಟ್ರೊಡ್ಯೂಸ್ ಮಾಡಿದ್ದೇ ದೊಡ್ಡ ಅಪರಾಧ ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ. ಇದು ಬರೀ ನಮ್ಮ ಪಕ್ಷದ ಪ್ರಶ್ನೆಯಲ್ಲ. ಆ ಕಡೆ ಇರುವ ಸದಸ್ಯರಲ್ಲೂ ಈ ಅಭಿಪ್ರಾಯ ಇದೆ. ತೂಗುವ ಕತ್ತಿಯನ್ನು ನಮ್ಮ ತಲೆ ಮೇಲೆ ಇಟ್ಟುಕೊಂಡರೆ ಎಲ್ಲರಿಗೂ ಕಷ್ಟವಾಗುತ್ತದೆ. ಆ ಕಡೆ ಇರುವವರು ನಾಳೆ ಈ ಕಡೆ ಬರಬಹುದು. ಅಪಾಯದ ಕತ್ತಿಯನ್ನು ನೇತು ಹಾಕಿಕೊಂಡು ಆಡಳಿತ ಮಾಡಲಿಕ್ಕೆ ಸಾಧ್ಯವೇ?

ಶ್ರೀ ಬಿ. ಎಸ್. ಯಡಿಯೂರಪ್ಪ,—ಇದು ಅಪಾಯದ ಪ್ರಶ್ನೆಯಲ್ಲ. ಸ್ವಾತಂತ್ರ್ಯ ಬಂದ ೪೦ ವರ್ಷಗಳು ಆದಮೇಲೆ ಕರ್ನಾಟಕ ರಾಜ್ಯದಲ್ಲಿ ಚುನಾಯಿತ ಶಾಸಕರು ಯಾರು ಬರುತ್ತಾರೆ ಅವರು ಬೇಜವಾಬ್ದಾರಿಯಿಂದ ಸುಳ್ಳು ಆರೋಪಗಳನ್ನು ಮಾಡುವವರು, ಅರ್ಹತೆ ಇಲ್ಲದೇ ಇರುವ ಜನ ಎಂಬುದನ್ನು ದೇಶದ ಜನರಿಗೆ ಸಾಬೀತು ಮಾಡಬೇಕು ಎಂದು ಇದ್ದೀರಾ? ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಶಾಸಕರಂ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ? ಹಾಗಾದರೆ ರಾಜ್ಯದ ಜನತೆ ನಮ್ಮ ಬಗ್ಗೆ ಏನು ತಿಳಿದುಕೊಳ್ಳಬೇಕು ? ಕರ್ನಾಟಕದ ಶಾಸಕರು ಭ್ರಷ್ಟರು, ಸುಳ್ಳು ಆರೋಪ ಮಾಡುವವರು, ಬೇಜವಾಬ್ದಾರಿ ಜನ ಎಂಬುದನ್ನು ದೇಶದ ಜನರಿಗೆ ಸಾಬೀತು ಮಾಡಬೇಕು ಎಂದಿದ್ದಾರಾ ಮುಖ್ಯಮಂತ್ರಿಗಳು? ಧೀಮಂತ ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸಿ ಎಂದು ಜನ ಅಧಿಕಾರ ಕೊಟ್ಟಾಗ ನಮ್ಮ ಬಗ್ಗೆ ಜನರಿಗೆ ಗೌರವ ಬರದೇ ಇರುವ ಸ್ಥಿತಿಗೆ ತಂದಿದ್ದೀರಲ್ಲ. ನ್ಯಾಯವಾಗಿ ಯೋಚನೆ ಮಾಡಬೇಕು ಇದನ್ನು ಚರ್ಚೆಗೆ ತೆಗೆದುಕೊಳ್ಳುವಂತಹದ್ದು ಸರಿಯಾದುದಲ್ಲ, ಸರ್ಕಾರವೇ ಇದನ್ನು ವಾಪಸ್ಸು ತೆಗೆದುಕೊಂಡು ಸರ್ಕಾರದ ಗೌರವವನ್ನು ಉಳಿಸಿಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಈ ಸಂದರ್ಭದಲ್ಲಿ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳ ಅಭಿಪ್ರಾಯ ಏನು ಇದೆ ಎಂದರೆ, ಇವತ್ತು ಸಾರ್ವಜನಿಕರ ಅಭಿಪ್ರಾಯವನ್ನು ತೆಗೆದುಕೊಳ್ಳುವುದು, ಹಾಗೂ ರಾಷ್ಟ್ರಮಟ್ಟದಲ್ಲಿ ಈ ಬಗ್ಗೆ ಚರ್ಚೆಯಾಗಬೇಕೆಂಬುದನ್ನು ಏನು ಹೇಳಿದ್ದಾರೆ, ಇದು ಸರ್ಕಾರದ ಅಭಿಪ್ರಾಯವೂ ಕೂಡ ಆಗಿದ್ದರೆ, ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಆದರೆ ಈ ಒಂದು ತಿದ್ದುಪಡಿ ಮಸೂದೆಯನ್ನು ಇಂಟರ್‌ಡ್ಯೂಸ್ ಮಾಡತಕ್ಕ ರೀತಿ ನೀತಿ ಇದೆಯಲ್ಲಾ ಇದರ ಬಗ್ಗೆ ನಮ್ಮ ದೊಡ್ಡ ಅಬ್ಜೆಕ್ಷನ್ ಇದೆ. ಇದರಿಂದ ಮಾನ್ಯ ಸದಸ್ಯರಾದ ನಾವುಗಳು ಈ ಪಂಚೆಯಲ್ಲಿ ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲ. ಜನತಾ ಪಕ್ಷದ ಕೆಲವು ಸದಸ್ಯರು ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದೆಲ್ಲಾ ರೈಟ್ ಎಂಬುದಾಗಿ ಹೇಳತಕ್ಕವರೂ ಕೆಲವರು ಇರಬಹುದು. ಆದರೆ ಎಲ್ಲರೂ ಆ ರೀತಿ ಹೇಳುತ್ತಿಲ್ಲ. ಮಾನ್ಯ ಸದಸ್ಯರ ಹಕ್ಕುಭಾದ್ಯತೆಗಳೇನು ಎಂಬುದನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಬೇಕು. ಈ ಸದನದಲ್ಲಿ ಇಂತಹ ಒಂದು ಮಸೂದೆಯನ್ನು ಮಂಡಿಸಿದ್ದೇ ಮಹಾಪರಾಧ. ಇದನ್ನು ಮುಂದೆ ರಿಪೇರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸದನದ ಮುಂದೆ ಮಂಡಿಸಿದ್ದು ಮುಂದೆ ಆ ಬಗ್ಗೆ ಚರ್ಚೆಗೆ ಅವಕಾಶ ಕೊಡವಂಥದ್ದೂ ದೊಡ್ಡ ಅಪರಾಧವಾಗುತ್ತದೆ. ಇನ್ನು ಮೇಲೆ ಯಾವ ಸದಸ್ಯರೇ ಆಗಲಿ ಸರ್ಕಾರದ ಲೋಪದೋಷಗಳನ್ನು ಎತ್ತಿ ಹೇಳುವುದಕ್ಕೆ ಅವಕಾಶ ಇಲ್ಲದಂತಾಗುತ್ತದೆ. ಅದರ ಬಗ್ಗೆ ನಮ್ಮ ಪಕ್ಷದ ವತಿಯಿಂದ ಈ ಮಸೂದೆಯನ್ನು ಸದನದಲ್ಲಿ ಇಂಟರ್‌ಡ್ಯೂಸ್ ಮಾಡಿದ್ದೇ ತಪ್ಪು ಎಂಬುದಾಗಿ ಹೇಳಬೇಕಾಗುತ್ತದೆ. ಅದೇ ರೀತಿಯ ಅಭಿಪ್ರಾಯವನ್ನು ಈ ಕಡೆ ಇರತಕ್ಕ ಸದಸ್ಯರೆಲ್ಲರೂ ವ್ಯಕ್ತಪಡಿಸಿದ್ದಾರೆ. ಬೇರೆ ಪಕ್ಷದವರೂ ಕೂಡ ಅದೇ ಅಭಿಪ್ರಾಯವನ್ನು ಹೊಂದಿದವರು ಇರಬಹುದು. ಈ ಮಸೂದೆಯನ್ನು ಸಭೆಯ ಮುಂದಿಟ್ಟುಕೊಂಡರೆ, ನಾಳೆ ಯಾವ ವಿಚಾರಗಳನ್ನೂ ಮಾನ್ಯ ಸದಸ್ಯರು ಎತ್ತುವುದಕ್ಕೆ ಸಾಧ್ಯವಾಗದೇ ಹೋಗಬಹುದು. ಮೊದಲು ಸರ್ಕಾರ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕು. ಪ್ರೆಸ್ಸಿಗೆ ಸಂಬಂಧಪಟ್ಟ ಬಿಲ್ಲೂ ಕೂಡ ಇದೇ ರೀತಿಯಾಗಿದೆ. ಆ ಬಗ್ಗೆ ಪತ್ರಿಕಾ ಸಂಘದವರು ದೊಡ್ಡ ಪ್ರತಿಭಟನೆಯನ್ನೇ ಮಾಡಿದ್ದಾರೆ.

ಅಧ್ಯಕ್ಷರು.—ಅವರು ರೆಪ್ರಸಂಟೇಷನ್ ಅನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನೂ ಕೂಡ ಹಿಂದಕ್ಕೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾಳೆ ಅವರು ದೊಡ್ಡ ಹೋರಾಟವನ್ನೇ ಮಾಡಬಹುದು. ಆದ್ದರಿಂದ ಆ ಬಿಲ್ಲನ್ನು ಕೂಡ ಸರ್ಕಾರ ವಾಪಸ್ಸು ತೆಗೆದುಕೊಳ್ಳಬೇಕು. ಆ ಬಗ್ಗೆ ತಮ್ಮ ಒಪ್ಪಿಗೆಗೋಸ್ಕರ ನಿರ್ಣಯವನ್ನು ಕಳುಹಿಸಿದ್ದೇವೆ ಇದು ನಿಮ್ಮ ಕೈಯ್ಯಲ್ಲಿದೆ. ಈ ಸದನದ ಮಾನ್ಯ ಸದಸ್ಯರುಗಳ ಹಕ್ಕನ್ನು ರಕ್ಷಣೆ ಮಾಡುವಂಥ ಅಧಿಕಾರ ನಿಮ್ಮಲ್ಲಿದೆ, ನೀವು ಕೂಡ ರಕ್ಷಣೆ ಮಾಡುವುದಿಲ್ಲ ಎಂದರೆ ಹೇಗೆ. ಈ ರೀತಿಯ ಹ್ಯಾಂಗಿಂಗ್ ಸ್ಟೋರ್ಡ್ ಅನ್ನು ಇಟ್ಟುಕೊಂಡು ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು.—ಇಂಟರ್‌ಡ್ಯೂಸ್ ಮಾಡಿದ್ದಾರೆ, ಇನ್ನೂ ಕನ್ಸಿಡರೇಷನ್‌ಗೆ ಬಂದಿಲ್ಲ. ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ರೀತಿಯಲ್ಲಿ ತಿದ್ದುಪಡಿಯನ್ನೂ ಕೂಡ ಮಾಡಬಹುದು. ಇಲ್ಲವೇ ವಾಪಸ್ಸಾದರೂ ತೆಗೆದುಕೊಳ್ಳಬಹುದು.

ಶ್ರೀ ಎಸ್. ಬಂಗಾರಪ್ಪ.—ಇದು ಬೇರೆ. ಆದರೆ ಈ ಮಸೂದೆಯ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುವುದು ಮಹಾ ಅಪರಾಧ. ಸರ್ಕಾರಕ್ಕೆ ಈ ಬಿಲ್ಲುಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಆದೇಶ ನೀಡಬೇಕು. If it is passed, it is going to be a draconian law. ಇದು ಸಣ್ಣ ವಿಚಾರವಲ್ಲ. ಇದೊಂದು ಬರ್ಬರ್ ಕೃತ್ಯವಾಗುತ್ತದೆ. ನಾಳೆ ಇದಂ ವಿಪರೀತ ಕಷ್ಟಕ್ಕೆ ಎಡೆ ಮಾಡಿಕೊಡುತ್ತದೆ. ಮಾನ್ಯ ಸದಸ್ಯರ ಹಕ್ಕಿಗೆ ಕತ್ತರಿ ಬೀಳುವಂತಾಗುತ್ತದೆ. ಪ್ರಿವಿಲೇಜ್ ಇದೆ ಎಂಬುದಾಗಿ ತಿಳಿದುಕೊಂಡು ಯಾವ ವಿಚಾರವನ್ನೂ ರೈಸ್ ಮಾಡದೇ ಇರಬಹುದು. ಇವತ್ತು ಅವರ ಪಕ್ಷಕ್ಕೆ ಮೆಜಾರಿಟಿ ಇದೆ ಎಂದು ಈ ರೀತಿ ಮಾಡಿಕೊಂಡು ಹೋದರೆ ಇದು ಸರಿಯಾದುದಲ್ಲ. ನಾಳೆ ನಾವು ಆ ಕಡೆ ಹೋಗಿ ಕುಳಿತುಕೊಳ್ಳಬಹುದು. ಆಗ ನೀವು ಈ ಕಡೆ ಬರಬಹುದು. ನಾವು ಆ ಕಡೆ ಬಂದಂತಹ ಸಂದರ್ಭದಲ್ಲಿ ಸರ್ಕಾರ ಮಾಡಿರುವಂತಹ ತಪ್ಪುಗಳನ್ನು ಯಾವಾಗ ಬೇಕಾದರೂ ತೆಗೆದುಕೊಂಡು ಬನ್ನಿ. ಬೇಡ ಎಂದು ಹೇಳುವುದಿಲ್ಲ. ಬಹಳ ದೊಡ್ಡ ದೊಡ್ಡ ವಿಚಾರಗಳನ್ನೆಲ್ಲಾ ಇಲ್ಲಿ ತೆಗೆದುಕೊಂಡು ಬಂದಿರತಕ್ಕ ನಿದರ್ಶನಗಳು ಇವೆ. ಆ ಬಗ್ಗೆ ತೀರ್ಪುಗಳನ್ನು ಕೊಡಲಾಗಿದೆ. ಅನೇಕ ವಿಚಾರಗಳು ನಿಮ್ಮ ಮೇಲೆ ವಿಚಾರಣೆಯಾಗುತ್ತಿವೆ. ಅವುಗಳನ್ನು ಇಲ್ಲಿ ಎತ್ತಬಾರದು, ನಮ್ಮುಗಳ ಬಾಯಿ ಮುಚ್ಚಿಸಬೇಕು ಎಂಬುದಾಗಿ ಯೋಚನೆ ಮಾಡಿದ್ದೀರೇನು? ಈಗ ತಂದಿರತಕ್ಕ ಮಸೂದೆ ಬಹಳ

ಕರಾಳವಾದ ಮಸೂದೆ. ಇಂತಹ ಮಸೂದೆಯನ್ನು ಸಭೆಯ ಮುಂದೆ ಇಟ್ಟುಕೊಂಡು ಪ್ರಜಾಪ್ರಭುತ್ವದ ಹಕ್ಕುಗಳ ಬಗ್ಗೆ ಮಾನ್ಯ ಸದಸ್ಯರು ಹೇಗೆ ಕೆಲಸ ಮಾಡಬೇಕು? ನಾವು ಇಲ್ಲಿರತಕ್ಕ ಮಾನ್ಯ ಸದಸ್ಯರು ಬೇಜವಾಬ್ದಾರಿ ಜನರೆ? ಈ ಮಸೂದೆಯನ್ನು ತಂದು ಸದಸ್ಯರ ಬಾಯನ್ನು ಮುಚ್ಚಿಸುವುದಕ್ಕೆ ಸಾಧ್ಯವಿಲ್ಲ. We stand here to be rectified.

ಆದುದರಿಂದ ಚರ್ಚೆ ಬೇಕಾಗಿಲ್ಲ. ಇದು ಒಂದು ಅಪಾಯದ ವಿಚಾರ. ದಯವಿಟ್ಟು ತಾವು ವಿಚಾರ ಮಾಡಿ. ನಾವು ಕಳುಹಿಸಿರತಕ್ಕ ನಿರ್ಣಯ ಏನೆಂದರೆ. ಈ ಮಸೂದೆ ಏನಿದೆ ಇದನ್ನು ದಯವಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕು, ಇದನ್ನು ಚರ್ಚೆಗೂ ಕೂಡಾ ತರಬಾರದು. ಇಷ್ಟು ಮಾತ್ರ ಹೇಳಿ ದಯವಾಡಿ ನಾವು ತಂದಿರತಕ್ಕ ವಿಷಯದ ಬಗ್ಗೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಒಂದು ವೇಳೆ ಈ ಪರ್ಷ ಮಾಡುವುದಿಲ್ಲ, ಮುಂದಿನ ಪರ್ಷ. ಮತ್ತೊಂದು ಪರ್ಷ ಮಾಡುತ್ತೇವೆ ಎನ್ನುವ ಅಭಿಪ್ರಾಯ ಹೇಳುವುದಾದರೆ, ನಾನು ಹೇಳುತ್ತೇನೆ, ಈ ಸದನದಲ್ಲಿ ಯಾರೂ ಕೂಡಾ ಮಾತನಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಮಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಅಧ್ಯಕ್ಷರೇ, ಈ ಹಕ್ಕುಭಾದ್ಯತೆಗಳ ಬಿಲ್ಲಿನ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಇವತ್ತಿನ ದಿವಸ ಈ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಏನೇನು ಬಂದಿದೆ ಎನ್ನುವುದು ಮಾನ್ಯ ಮುಖ್ಯಮಂತ್ರಿಗಳಿಗೇ ಗೊತ್ತಿದೆ. ಈ ಬಗ್ಗೆ ಎಲ್ಲಾ ಪ್ರೆಸ್‌ನವರೂ ಕೂಡಾ ಬರೆದಿದ್ದಾರೆ, ಎಲ್ಲಾ ಸಂಘಸಂಸ್ಥೆಗಳವರೂ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಈ ಬಿಲ್‌ನಲ್ಲಿ ಹಕ್ಕುಭಾದ್ಯತೆಗಳನ್ನು ಕೊಡುವುದಕ್ಕಿಂತಲೂ ನಿರ್ಭಂದಗಳೇ ಜಾಸ್ತಿ ಇದೆ. ಈ ಬಿಲ್ಲನ್ನು ಇಂಟ್ರಡ್ಯೂಸ್ ಮಾಡುವುದೇ ಸರಿಯಲ್ಲ ವೆಂದು ಲೀಗಲ್ ಎಕ್ಸ್‌ಪರ್ಟ್ಸ್‌ಕೂಡಾ ಹೇಳಿದ್ದಾರೆ ಈಗಾಗಲೇ ಇಂಥ ಅಭಿಪ್ರಾಯಗಳು ಎಲ್ಲಾದಿಕ್ಕಿನಲ್ಲಿ ಬಂದಿವೆ. ನಿಯಮ ೧೮೪ ಇದೆ, ೧೮೪(೩) ಈ ರೀತಿ ಹೇಳುತ್ತದೆ ಎಂದು ಮಾನ್ಯ ಕಾನೂನು ಮಂತ್ರಿಗಳು ಹೇಳುವಂತೆ ಇದನ್ನು ಓದಿ ತೋರಿಸುವುದು ಸರಿಯಲ್ಲ ನಮ್ಮ ಪುಣ್ಯಕ್ಕೆ ಮಾನ್ಯ ಬಣಕಾರ್ ಅವರು ಇಲ್ಲಿ ಅಧ್ಯಕ್ಷರಾಗಿ ಕುಳಿತಿರುವುದಕ್ಕೆ ಸರಿಹೋಯಿತು. * * * ಆದರೆ ಶಾಸಕರಿಗಾಗಿಯೇ ಸೆಂಟ್ರಲ್ ಜೈಲಿನಲ್ಲಿ ಒಂದು ಸೆಲ್‌ನ್ನು ಮಾಡಬೇಕಾಗುತ್ತದೆ. ನಾವು ಹೇಳಿದ್ದಕ್ಕೆಲ್ಲಾ ತಮಿಳುನಾಡಿನ ಸ್ಪೀಕರ್ ಆಗಿದ್ದರೆ "They have disobeyed. Take them to the jail" ಎಂದು ಕಳುಹಿಸುತ್ತಿದ್ದರು. ಇಂದು ಅಂತಹ ಪರಿಸ್ಥಿತಿ ಬಂದರೂ ಹೆಚ್ಚೆಲ್ಲ. ಆದುದರಿಂದ ನಾನು ಹೇಳುವುದು, ಪಬ್ಲಿಕ್ ಒಪಿನಿಯನ್ ಗಾಗಿ ಇಂಟ್ರಡ್ಯೂಸ್ ಮಾಡಿದಮೇಲೆ ತಮಗೆ ಪಬ್ಲಿಕ್ ಒಪಿನಿಯನ್ ಗೊತ್ತಾಗಿದೆ. ನಿಮ್ಮ ಪಾರ್ಟಿಯವರೇ ಇದನ್ನು ಒಪ್ಪಿಲ್ಲ. ಕಾರಿಗಳು ನಾವಲ್ಲ ಎಂದು ಇದೇ ಪದವನ್ನು ಉಪಯೋಗ ಮಾಡಿ ನಿಮ್ಮ ಪಾರ್ಟಿಯವರೇ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಏನು ಒಂದು ಕರಾಳ ಶಾಸನವನ್ನು ತಂದಿದ್ದಾರೆ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ (ಗುರುಮಿಠ್ಕಲ್).— ಅಧ್ಯಕ್ಷರೇ, ನಿಯಮ ೧೫೯ರ ಕೆಳಗೆ ಈ ವಿಷಯವನ್ನು ಚರ್ಚೆ ಏಕೆ ಮಾಡಬೇಕೆಂದು ನಾವು ಕೇಳಿರುವ ವಿಷಯ ತಮಗೂ ಗೊತ್ತಿದೆ. ಅನೇಕ ಸಲ ನಮ್ಮ ಕ್ಷೇತ್ರದಲ್ಲಿ ಯಾವುದೋ ಒಂದು ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುವ ಸಂದರ್ಭದಲ್ಲಿ ಆ ಕೆಲಸದಲ್ಲಿನ ವಿಷಯದ ಬಗ್ಗೆ ಸಾರ್ವಜನಿಕರಿಂದ ಆರ್ಜಿಗಳು, ಕಂಪ್ಲೇಂಟ್ಸ್‌ಗಳು ಬರುತ್ತವೆ ಇಂತಹ ಅಧಿಕಾರಿಯಿಂದ ಇಂತಹ ತಪ್ಪು ನಡೆದಿದೆ ಎಂದು ಹೇಳುತ್ತಾರೆ. ಅದನ್ನೆಲ್ಲಾ ಆಧಾರವಾಗಿ ಇಟ್ಟುಕೊಂಡು ನಾವು ಇಲ್ಲಿ ಒಂದು ಅಲಿಗೇಷನ್ ಮಾಡುತ್ತೇವೆ. ಈ ಅಲಿಗೇಷನ್ಸ್ ವಿವರವಾಗಿ ತಪಾಸಣೆ ಆದಮೇಲೆ ಕೆಲವೊಂದು ಬಾರಿ ಅಲ್ಲಿ ಎಲ್ಲಾ ಸರಿಯಾಗಿ ನಡೆದಿದ್ದು ನೀವು ಹೇಳಿದೇ ತಪ್ಪು ಎಂದು ನಮಗೆ ಹೇಳಬಹುದು. ಆದರೆ ನಿಜವೇ ಬೇರೆ ಆಗಿರುತ್ತದೆ. ತಾವೂ ಕೂಡಾ ವಕೀಲರಿದ್ದೀರಿ ಒಂದು ಕಡೆ ಮರ್ಡರ್ ಆಗಿರುವುದು ತಮಗೆ ಗೊತ್ತಿರುತ್ತದೆ. ಆದರೆ ಅಲ್ಲಿ ನಿಜವಾದ ಅಪರಾಧಿ ಬಿಡುಗಡೆ ಹೊಂದುತ್ತಾನೆ. ಆತನಿಗೆ ಶಿಕ್ಷೆ ಆಗುವುದಿಲ್ಲ. ಇದೆಲ್ಲಾ ನಡೆಯುತ್ತಿರುವುದನ್ನು

---

* ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಾವೂ ಕೂಡಾ ಗಮನಿಸಿದ್ದೀರಿ. ಪತ್ರಿಕೆಗಳಲ್ಲಿ ಬಂದ ವಿಷಯದ ಬಗ್ಗೆ, ನಮಗೆ ಬಂದ ದೂರುಗಳ ಬಗೆ ನಾವು ಈ ಸದನದಲ್ಲಿ ಎತ್ತಿತ್ತೇವೆ. ಆದರೆ ನಾಳೆಯಿಂದಿವಸ ಒಂದು ವೇಳೆ ಈ ಬಿಲ್ ಪ್ರಕಾರ ಆಕ್ಷನ್ ತೆಗೆದುಕೊಳ್ಳುವುದಾದರೆ ಮಾನ್ಯ ಸದಸ್ಯರು ಹೇಳಿದ ಪ್ರಕಾರ (***) ಸೆಂಟ್ರಲ್ ಜೈಲಿನಲ್ಲಿ ಶಾಸಕರಿಗಾಗಿಯೇ ಪ್ರತ್ಯೇಕ ಸೆಲ್‌ಗಳನ್ನು ತೆರೆಯಬೇಕಾಗುತ್ತದೆ. ಸೆಂಟ್ರಲ್ ಜೈಲ್ ತುಂಬಿ ಹೋಗುತ್ತದೆ. ಆದುದರಿಂದ ನಮ್ಮ ಹಕ್ಕುನ್ನು ಮೊಟಕು ಮಾಡತಕ್ಕ ಈ ಕಾನೂನು ಏನಿದೆ, ಪ್ರೆಸ್ ಫ್ರೀಡಂನ್ನು ಕರ್ಟೈಲ್ ಮಾಡತಕ್ಕದ್ದು ಏನಿದೆ ಅದು ಬರುವುದು ಬೇಡ. ೫ ಸಾವಿರದಿಂದ ೬೦ ಸಾವಿರ ರೂಪಾಯಿ ಜುಲ್ಮಾನೆ, ೬ ತಿಂಗಳಿಂದ ೫ ವರ್ಷಗಳವರೆಗೆ ಶಿಕ್ಷೆ ಏನಿದೆ ಅದನ್ನು ಹೆಚ್ಚು ಕಡಿಮೆ ಮಾಡುವ ಪ್ರಶ್ನೆ ಇದು ಅಲ್ಲ.

ಅಧ್ಯಕ್ಷರು — ಮಾನ್ಯ ಸದಸ್ಯರು ಮಾತನಾಡುವಾಗ ಪಾಂಡ್ಯನ್ ಎಂದು ಹೆಸರು ಹೇಳಿದ್ದೀರಿ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಂತಹ ಮಹಾ ಪುರುಷರು ಬಂದರೆ ಏನು ಗತಿ? ತಮ್ಮಂತಹವರು ಇದ್ದರೆ ಒಳ್ಳೆಯದು. ಅದಕ್ಕೆ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು. ಒಂದು ಕಡೆ ಪ್ರೆಸ್‌ನವರಿಗೆ ಹೊಡೆತ ಆಗತಕ್ಕದ್ದು ಇದೆ. ಮತ್ತೊಂದು ಕಡೆ ಶಾಸಕರಿಗೆ ಇರತಕ್ಕ ಹಕ್ಕುಗಳನ್ನು ಮೊಟಕು ಮಾಡತಕ್ಕ ಕೆಲಸವನ್ನು ಈ ಕಾನೂನಿನ ಮೂಲಕ ಮಾಡುತ್ತಿದ್ದೀರಿ. ಕೌಲ್ ಅಂಡ್ ಶಕ್ಧಾರ್‌ರವರು ಹೇಳಿದ್ದಾರೆ. ಮದ್ರಾಸ್ ಎಂಡೋಮೆಂಟ್ ಬಿಲ್ ಪಾಸ್ ಮಾಡುವಾಗ ಅವರು ಹೇಳಿದ್ದಾರೆ ಇವತ್ತು ಆ ಬಿಲ್ಲು ಏನು ಬಂದಿದೆ ಅದು ಸಂವಿಧಾನಕ್ಕೆ ವಿರೋಧವಾದುದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದೇ ರೀತಿ ಪಬ್ಲಿಕ್ ಹೇಳುತ್ತಿದ್ದಾರೆ. ಆ ಪಕ್ಷದವರು ಹೇಳುತ್ತಿದ್ದಾರೆ ಈ ಪಕ್ಷದವರು ಹೇಳುತ್ತಿದ್ದಾರೆ. ಕಮ್ಯೂನಿಸ್ಟ್ ಪಕ್ಷದವರು ಹೇಳುತ್ತಿದ್ದಾರೆ ಸಾರ್ವಜನಿಕರು ಎಂದರೆ ಏನು? ಈ ದೇಶದಲ್ಲಿ ನಮ್ಮ ಧರ್ಮದ ಪ್ರಕಾರ ನಿಮಗೆಲ್ಲಾ ಗೊತ್ತಿದೆ, ಅಸ್ಪೃಶ್ಯತೆಯನ್ನು ಪ್ರಾಕ್ಟೀಸ್ ಮಾಡದಹಾಗೆ ಒಪ್ಪಿಕೊಂಡಿದ್ದೇವೆ. ಆದಕ್ಕೆ ನಾವು ಕಾನೂನು ತಂದಿಲ್ಲ. ಅಸ್ಪೃಶ್ಯತೆಯನ್ನು ತೆಗೆದು ಹಾಕಬೇಕೆಂದು ಕಾನೂನು ತಂದಿಲ್ಲ. ಈ ರೀತಿ ಪುಸ್ತಾದೆಯನ್ನು ಇಂಟರ್‌ಡ್ಯೂಸ್ ಮಾಡಿರುವುದು ಒಂದು ದೊಡ್ಡ ಹಾನಿಯಾಗಿದೆ. ಅದು ಇಡೀ ಶಾಸಕರಿಗೆ ಅಲ್ಲ ಪ್ರೆಸ್‌ನವರಿಗೂ ಮುಂದೆ ಬರತಕ್ಕ ಜನರೇಷನ್‌ಗೂ ಬೈಂಡಿಂಗ್ ಮಾಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ ನಾವು ರೂಲ್ ೨೫೧ರ ಪ್ರಕಾರ ನೋಟೀಸ್ ಕೊಟ್ಟಿದ್ದೇವೆ. ತಾವು ನೋಡೋಣವೆಂದು ಹೇಳಿದ್ದೀರಿ. ಈಗ ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಕಾನೂನು ಮಂತ್ರಿಗಳೂ ಇದ್ದಾರೆ. ದಯವಿಟ್ಟು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ. ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ರೆಡಿಯಾಗಿ ಬಂದಿದ್ದಾರೆ ಇದಕ್ಕೆ ಅವರು ಸಹ ಒಪ್ಪುತ್ತಾರೆ. ಇದನ್ನು ತಾವು ದಯವಿಟ್ಟು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದವರು ಸಂವಿಧಾನದ ೫೬ನೇ ಕಾಲಂಗೆ ತಿದ್ದುಪಡಿಯನ್ನು ಮಾಡಿದರು. ಇವರು ಯಾವ ಬಾಯಲ್ಲಿ ತಂದಿರಿ ಎಂದು ಕೇಳುತ್ತಿದ್ದಾರೆ? ಅವರು ತಂದರು ಏನು ಮಾಡಿದರು?

ಶ್ರೀ ಎಸ್. ಬಂಗಾರಪ್ಪ —ನಿಮ್ಮ ಹಾಗೆ ಅವರು ಕೋಡಿಫಿಕೇಶನ್ ಮಾಡಿದ್ದಾರೆಯೇ ? ತಿದ್ದುಪಡಿ ವಿಚಾರ ಅದನ್ನು ಹೇಳಿ. ಅದಕ್ಕೆ ಕೋಡಿಫಿಕೇಶನ್ ಮಾಡುವುದಕ್ಕೆ ನಿಮ್ಮ ಹಾಗೆ ಅವರು ಹೋಗಿದ್ದಾರೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ಆಗ ಪತ್ರಿಕಾ ಸ್ವಾತಂತ್ರ್ಯದ ಹರಣ ಆಗುತ್ತಿರಲಿಲ್ಲವೆ ?

ಶ್ರೀ ಎಸ್. ಬಂಗಾರಪ್ಪ. —ನೀವು ಏನು ಮಾಡುತ್ತಿದ್ದೀರಿ ? ನೀವು ಯಾವ ಮುಖದಿಂದ ಹೇಳುತ್ತಿದ್ದೀರಿ ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನೀವು ಕುಳಿತುಕೊಳ್ಳಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಲಿ. ನಿಮಗೆ ಅವಕಾಶ ಕೊಟ್ಟಿದ್ದೇನೆ. ಈಗ ಮುಖ್ಯಮಂತ್ರಿಗಳನ್ನು ಕರೆದಿದ್ದೇನೆ. ಅವರು ಉತ್ತರ ಹೇಳಲಿ.

ಶ್ರೀ ಜಿ.ಎಸ್. ಶಿವನಂಜಪ್ಪ.—ಕೇಂದ್ರದಲ್ಲಿ ಮಾಡಿದ್ದರೆ ನೀವು ಏತಕ್ಕೆ ಮಾಡಬೇಕು ? ಇಲ್ಲಿ ಏತಕ್ಕೆ ಮಾಡಬೇಕು ?

ಶ್ರೀ ರಾಮಕೃಷ್ಣ ಹೆಗಡೆ —ಈ ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುತ್ತೇವೆ. ಎಷ್ಟು ಬೇಕಾದರೂ ಚರ್ಚೆ ಮಾಡಬಹುದು, ಮತ್ತು ಇದನ್ನು ಪಾಸ್ ಮಾಡಲೇ ಬೇಕೆಂದು ಹೇಳಿಲ್ಲ. ಈ ವರ್ಷವೇ ಪಾಸ್ ಮಾಡಬೇಕೆಂದು ಹೇಳಿಲ್ಲ.

ಶ್ರೀ ಎಸ್. ಬಂಗಾರಪ್ಪ.— ವಿಧೇಯಕವನ್ನು ಇಂಟರ್‌ಡ್ಯೂಸ್ ಮಾಡುವುದು ಹೇಗೆ ? ಯಾವುದೇ ಹಂತದಲ್ಲಿ ಚರ್ಚೆ ಮಾಡದೆ ಹಾಗೆಯೇ ಇಂಟರ್‌ಡ್ಯೂಸ್ ಮಾಡಿದ್ದೀರಿ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನೀವು ಮಾತನಾಡುವುದು ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ರೆಕಾರ್ಡ್‌ಗೆ ಹೋಗುವುದು ಬಿಡುವುದು ಅದು ತಮಗೆ ಬಿಟ್ಟ ವಿಚಾರ.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಲಿ. ಅವರು ಉತ್ತರ ಹೇಳಿ ಮುಂಗಿಸಿದ ಮೇಲೆ ತಾವು ಕ್ಲಾರಿಫಿಕೇಶನ್ ಕೇಳಿ.

೩–೦೦ ಪಿ.ಎಂ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್ ಆಗುವುದಿಲ್ಲ.

ಶ್ರೀ ಎಸ್, ಬಂಗಾರಪ್ಪ.—ನಾನು ವಿಚಾರ ಹೇಳತಕ್ಕದ್ದು...

ಅಧ್ಯಕ್ಷರು.—ನಾವು ಒಂದು ಪದ್ಧತಿ ಪ್ರಕಾರ ನಡೆದುಕೊಳ್ಳಬೇಕು. ನಿಮಗೆ ಅವಕಾಶವನ್ನು ಕೊಟ್ಟಿದ್ದೇನೆ. ಶ್ರೀ ವೆಂಕಟರಾಮಯ್ಯನವರಿಗೂ ಅವಕಾಶ ಕೊಟ್ಟಿದ್ದೇನೆ, ಸರ್ಕಾರದ ಉತ್ತರ ನಿಮಗೆ ಬೇಕೋ ಬೇಡವೋ ? ನೀವು ಏನೇಲ್ಲಾ ಹೇಳಿದ್ದೀರಿ ಅವರೂ ಹೇಳಲಿ ಬಿಡಿ.

ಶ್ರೀ ಎಸ್. ಬಂಗಾರಪ್ಪ — ಕಾನ್ಸ್‌ಟ್ಯೂಶನ್ ಅಮೆಂಡ್‌ಮೆಂಟ್ ಬಗ್ಗೆ ನಾವು ಮಾತ ನಾಡಿದ್ದೆವೇಯೇ ? ನಮಗೆ ಸದನದ ಹಕ್ಕು ಏನಿದೆ, ಅದರ ಬಗ್ಗೆ ಮಾತನಾಡೋಣ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ ಅವರಿಗೆ ಹೇಳುವುದಕ್ಕೆ ಸ್ವಾತಂತ್ರ್ಯ ಇದೆ, ನಿಮಗೆ ಹೇಗೆ ಸ್ವಾತಂತ್ರ್ಯ ಇದೆಯೋ, ಅವರಿಗೂ ಹಾಗೆಯೇ ಇದೆ.

(ಗೊಂದಲ)

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ...

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ ನಿಮ್ಮದು ಮುಗಿದಿದೆ. ನಿಮಗೆ ಅವಕಾಶ ಕೊಡುವುದಿಲ್ಲ, ನಿಮ್ಮದು ಎಲ್ಲಾ ಮುಗಿದಮೇಲೆ ಮಾನ್ಯ ಮುಖ್ಯಮಂತ್ರಿಗಳು ಹೇಳುವುದಕ್ಕೆ ಎದ್ದು ನಿಂತಿದ್ದಾರೆ ಶ್ರೀ ಬಂಗಾರಪ್ಪನವರು ಮಾತನಾಡಿದ ಮೇಲೆ ಶ್ರೀ ವೆಂಕಟರಾಮಯ್ಯನವರು ಮಾತನಾಡಿದ್ದಾರೆ. ನಿಮ್ಮದೆಲ್ಲರದ್ದೂ ಮುಗಿದಮೇಲೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲಿಕ್ಕೆ ಎದ್ದು ನಿಂತಿದ್ದಾರೆ,

ಶ್ರೀ ಜಿ, ಮಾದೇಗೌಡ.—ನಾನು ಎದ್ದು ನಿಂತರೆ ತಾವು ಏಕೆ ಅವಕಾಶ ಕೊಡುವುದಿಲ್ಲ ? ಈ ಕಾನೂನನ್ನು ಈಗಲೇ ಜಾರಿಗೆ ಕೊಟ್ಟುಬಿಡಿ ನೀವು.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಮಾತನಾಡಲಿಕ್ಕೆ ಕರೆದಿದ್ದೇನೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಏನೇ ಮಾಡಿದರೂ ನಾನು ಇದನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ ಮೇಲೆ ಅವರ ವಿವರಣೆ ಬೇಕಾಗಿಲ್ಲ. ನಮಗೆ ಇದು ಅರ್ಥವಾಗುತ್ತಿಲ್ಲ ನಾವು ಹೇಳಿದ್ದು ತಮಗೂ ಏಕೆ ಅರ್ಥವಾಗುತ್ತಿಲ್ಲ ?

ಅಧ್ಯಕ್ಷರು.—ನೀವು ಹೀಗೆ ಸುಮ್ಮನೆ ಎದ್ದು ನಿಂತು ಮಾತನಾಡಿದರೆ ನಾನು ಏನು ಹೇಳಲಿ ? ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ಅವರು ಎಲ್ಲಾ ಹೇಳಿಯಾದ ಮೇಲೆ ಬೇಕಾದರೆ ಕ್ಲಾರಿಫಿ

ಕೇಶನ್ ಕೇಳುವುದಕ್ಕೆ ನಾನು ತಮಗೆ ಅವಕಾಶ ಕೊಡುತ್ತೇನೆ. ಅವರು ಅರ್ಧದಷ್ಟು ಈಗಾಗಲೇ ಮಾತನಾಡಿದ್ದಾರೆ. ತಮಗೆ ಕ್ಲಾರಿಫಿಕೇಶನ್‌ಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ.—ನನಗೂ ಸ್ವಲ್ಪ ಹೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಆಗುವುದಿಲ್ಲ. ರೂಲ್ಸ್‌ರೆಗ್ಯುಲೇಶನ್ಸ್‌ನ್ನು ಗಾಳಿಗೆ ತೂರಬೇಕೆಂದು ಹೇಳುತ್ತೀರಾ? ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಎದ್ದು ನಿಂತಿದ್ದಾರೆ, ನೀವು ನನಗೆ ಅವಕಾಶ ಕೊಡಿ ಎಂದು ಹೇಳುತ್ತಿದ್ದೀರಿ. ನಿಮಗೆ ಅವಕಾಶ ಹೇಗೆ ಕೊಡುವುದಕ್ಕೆ ಆಗುತ್ತದೆ ? ಮಾನ್ಯ ಮುಖ್ಯಮಂತ್ರಿಗಳು ಹೇಳುವುದನ್ನು ಹೇಳಲಿ. ಆಮೇಲೆ ಬೇಕಾದರೆ ನಿಮಗೆ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ ? ಖಂಡಿತ ಅವಕಾಶ ಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಇದನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದಮೇಲೆ...

ಅಧ್ಯಕ್ಷರು.—ನಿಮಗೆ ನಾನು ಅವಕಾಶ ಕೊಟ್ಟಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ. ಮಾದೇಗೌಡ.—ಏನು ಗತಿ ಬಂತು ಸ್ವಾಮಿ ಇದು ? ಈ ಪರಿಸ್ಥಿತಿಯನ್ನು ನಾನೆಲ್ಲೂ ಕಂಡಿದ್ದಿಲ್ಲ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ನಿಮಗೆ ನಾನು ಅವಕಾಶ ಕೊಡುವುದಿಲ್ಲ. ನೀವು ಸೀನಿಯರ್ ಮೆಂಬರ್ ಇದ್ದೀರಿ. ನೀವೇ ಹೀಗೆ ಮಾಡಿದರೆ ಹೇಗೆ ?

ಶ್ರೀ ಜಿ. ಮಾದೇಗೌಡ.—ತಾವು ಈ ರೀತಿ ರಿಮಾರ್ಕ್ಸ್ ಮಾಡಿದರೆ ನಾನಂ ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಎದ್ದುನಿಂತಕೂಡಲೇ ಕುಳಿತಂಕೊಳ್ಳಿ ಎಂದು ಹೇಳುತ್ತೀರಿ.

ಅಧ್ಯಕ್ಷರು.—ಹಾಗಾದರೆ ರೂಲ್ಸ್ ರೆಗ್ಯುಲೇಶನ್ಸ್‌ನ್ನು ಗಾಳಿಗೆ ತೂರಬೇಕೇನಂ ?

ಶ್ರೀ ಜಿ. ಮಾದೇಗೌಡ.—ಮಾದೇಗೌಡರು ಮಾತನಾಡಬಾರದು ಎಂದು ಕಾಯಿದೆಯಲ್ಲಿ ಇದೆಯೇನಂ ? ಇಲ್ಲದಿದ್ದರೆ ಹಾಗೆಂದು ಸೇರಿಸಿಬಿಡಿ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಎದ್ದು ನಿಂತಿದ್ದಾರೆ. ಅವರಿಗೆ ನಾನು ಅವಕಾಶ ಕೊಟ್ಟಿದ್ದೇನೆ. ಅವರು ಹೇಳಿದಮೇಲೆ ನಿಮಗೆ ನಾನು ಅವಕಾಶ ಕೊಡುತ್ತೇನೆ ಈಗ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರು ಮಾತನಾಡಿ ಮುಗಿಸಿದರಂ ಎಂದು ಹೇಳಬೇಕು...

ಶ್ರೀ ಎಸ್. ಬಂಗಾರಪ್ಪ.—ನೀವು ಎಲ್ಲಿಯವರೆಗೆ ಇಂತಹ ಪ್ರಯತ್ನ ಬಿಡುವುದಿಲ್ಲ. ಅಲ್ಲಿಯವರೆಗೆ ನನ್ನ ಮಾತನ್ನು ಮುಂದುವರಿಸುತ್ತೇನೆ. ಇದು ನನ್ನ ನೀತಿ.

ಶ್ರೀ ರಾಮಕೃಷ್ಣ ಹೆಗಡೆ.—ಆವರ ಹಕ್ಕನ್ನು ಮೊಟಕು ಮಾಡುವುದು ಸಾಧ್ಯವಿಲ್ಲ. ಅವರು ಯಾವ ನಿಯಮಗಳಿಗೂ ಒಳಗಾದವರಲ್ಲ. ಆದಕ್ಕಾಗಿ ಅವರ ಹಕ್ಕು ಮೊಟಕಾಗುವುದಿಲ್ಲ. ಆದರೆ ಇದೇ ಮಾತನ್ನು ಏಕೆ ಮಾನ್ಯ ಖರ್ಗೆಯವರ ವಿಚಾರದಲ್ಲಿ, ಮಾನ್ಯ ಬಸವಲಿಂಗಪ್ಪನವರ ವಿಚಾರದಲ್ಲಿ ಹೇಳುವುದಕ್ಕಾಗುವುದಿಲ್ಲ?.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಇಲ್ಲಿ ಎಕೆ ಜಗಳ ಹಚ್ಚುತ್ತೀರಿ. ನಿಮ್ಮ ನಿಮ್ಮಲ್ಲಿ ಇರತಕ್ಕ ಜಗಳ ಸರಿಮಾಡಿಕೊಳ್ಳಿ. ಒಂದುಕಡೆ ವೇವೇಗೌಡರು ಇನ್ನೊಂದು ಕಡೆ ಬೊಮ್ಮಾಯಿಯವರು .....

ಶ್ರೀ ಎಸ್, ಬಂಗಾರಪ್ಪ,—ನಮ್ಮ ಕಡೆಯವರ ಬಗ್ಗೆ ಹೇಳುವುದು ನಿಮ್ಮ ಹಳೆಯ ರಾಗ. ಯಾವುದಾದರೂ ಹೊಸರಾಗವನ್ನು ನೀವು ಹುಡುಕುವುದು ಒಳ್ಳೆಯದು. ನೀವು ಖರ್ಗೆಯವರು, ಬಸವಲಿಂಗಪ್ಪನವರು ಎಂದು ಹೇಳುವುದು, ಇದು ಹಳೆಯದು. ನಾನು ೫ ವರ್ಷಗಳಿಂದ ತಮ್ಮನ್ನು ನೋಡುತ್ತಿದ್ದೇನೆ. ಇದನ್ನು ಏಕೆ ಹೇಳಬೇಕು? ನಿಮ್ಮ ರಾಗವನ್ನು ರಿಪೇರಿ ಮಾಡಿಕೊಂಡು,

ವಿಷ್ಯದನ್ನು ಮಾತನಾಡಿ. ಈಗ ನೀರವಾಗಿ ಬಿಲ್ ವಿಚಾರಕ್ಕೆ ಬನ್ನಿ. ಪೀಠಿಕೆ ಮಾಂಗಿಸಿ, ಬಿಲ್ ವಿಚಾರಕ್ಕೆ ಬನ್ನಿ.

ಶ್ರೀ ರಾಮಕೃಷ್ಣ ಹೆಗಡೆ —ಅವರ ವಿಚಾರದಲ್ಲಿ ನಾನು ಈ ಮಾತನ್ನು ಹೇಳತಕ್ಕಂಥ ಅಗತ್ಯ ಇಲ್ಲ ನಾನು ಮಾತನಾಡುವುದಕ್ಕೆ ಎದ್ದತಕ್ಷಣ ಇಷ್ಟೊಂದು ಹಸ್ತಕ್ಷೇಪ, ಮಧ್ಯದಲ್ಲಿ ಪ್ರವೇಶ ಮಾಡುವುದು ಬೇರೆಯವರು ಯಾರೂ ಮಾಡುವುದಿಲ್ಲ. ಮಾನ್ಯ ಮಾದೇಗೌಡರು ಹೇಳಿದರು, ಈ ವಿಧೇಯಕವನ್ನು ವಾಪಸ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದಮೇಲೆ, ಇಲ್ಲಿ ಮಾತನಾಡುವುದು ಏನು ಉಳಿದಿದೆ ಎಂದು. ನಾನು ಈ ವಿಧೇಯಕವನ್ನು ಏಕೆ ತರು ಮಾಡಿದ್ದು ಎಂದರೆ ಕೋರಸ್ ಬಂತು. ಆದ್ದರಿಂದ ನಾನು ವಾಪಸ್ ತೆಗೆದುಕೊಳ್ಳುವುದಿಲ್ಲ. ಇದರ ಬಗ್ಗೆ ಚರ್ಚೆಯಾದ ಮೇಲೆ ಈ ಮನೆಯ ಅಭಿಪ್ರಾಯ, ಮೆಜಾರಿಟಿ ಅಭಿಪ್ರಾಯ ತೆಗೆದುಕೊಂಡು ಶಾಸಕರ ಅಧಿಕಾರಕ್ಕೆ ಪೋಟಕ ತರುತ್ತದೆ. ಜನತಂತ್ರಕ್ಕೆ ಇದು ವಿರೋಧಿ ಎಂದು ಹೇಳತಕ್ಕಂಥ ಅಭಿಪ್ರಾಯ ಬಂದರೆ ಆಗ ವಾಪಸ್ ತೆಗೆದುಕೊಳ್ಳೋಣ. ಆದರೆ ಇವತ್ತೂ ವಾಪಸ್ ತೆಗೆದುಕೊಳ್ಳುವುದಿಲ್ಲ. ಏಕೆಂದರೆ, ಇದರ ಉದ್ದೇಶ ಜನರಲ್ಲಿ ಚರ್ಚೆಯಾಗಬೇಕು, ಮಾನ್ಯ ಶಕ್ತರ್‌ರವರು ಇದರ ವಿರುದ್ಧ ಹೇಳಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಅವರು ಹೇಳಿರುವುದನ್ನು ನಾನೂ ನೋಡಿದ್ದೇನೆ. ಮಾನ್ಯ ಪಾಲ್ಕಿವಾಲಾ ಕೂಡ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜೇತ್ಮಲಾನಿಯವರು ಕೂಡ ಹೇಳುತ್ತಾರೆ.....

ಶ್ರೀ ರಾಮಕೃಷ್ಣ ಹೆಗಡೆ.—ಪಾಲ್ಕಿವಾಲಾ ಎಂದು ಹೇಳಿದರೆ ನೀವು ಇಷ್ಟೊಂದು ನಗುತ್ತೀರಿ. ಮತ್ತೆ ಜೇತ್ಮಲಾನಿ ಹೆಸರು ಬಂದರೆ ನಿಮಗೆ ಹುರಿ ಬರುತ್ತದೆ. ಜೇತ್ಮಲಾನಿ ರಾಜ್ಯಸಭೆಗೆ ಹೋಗಿ ಕುಳಿತುಕೊಳ್ಳಲಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಹಿಂದೆ ಬಿ.ಜೆ.ಪಿ: ಪಕ್ಷದ ಎಂ.ಪಿ. ಆಗಿ ಬಂದಿದ್ದರು ಆಗ ನೋಡಿದ್ದೇವೆ.....

ಶ್ರೀ ಎಸ್, ಬಂಗಾರಪ್ಪ.—ಇಂತಹ ಸಾವಿರಾರು ಜೇತ್ಮಲಾನಿಗಳು ಬಂದರೂ ಸಹಿಸಿಕೊಳ್ಳುವ ಶಕ್ತಿ ನಮಗೆ ಇದೆ.....

ಶ್ರೀ ರಾಮಕೃಷ್ಣ ಹೆಗಡೆ.—ಈಗಾಗಲೇ ನಿಮಗೆ ನಡುಕ ಹುಟ್ಟಿದೆ.....

ಶ್ರೀ ಬಿ. ಎಸ್, ಯಡಿಯೂರಪ್ಪ.— ಮಾನ್ಯ ಮುಖ್ಯಮಂತ್ರಿಗಳು ಪೂರ್ತಿ ಅಭಿಪ್ರಾಯ ಕೊಟ್ಟ ಮೇಲೆ ನೀವು ಮಾತನಾಡಿ, ಮೊದಲು ಅವರ ಅಭಿಪ್ರಾಯ ಕೊಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಹಾಗಾದರೆ ಒಂದು ಕೆಲಸ ಮಾಡಲಿ, ನಾನು ಏನು ಮಾತನಾಡಬೇಕು ಎಂದು ಬಂಗಾರಪ್ಪನವರು ಬರೆದುಕೊಡಲಿ, ನಾನು ಓದಿಬಿಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನೀವೂ ಕೂಡಾ ಬರೆದುಕೊಟ್ಟುಬಿಡಿ.

ಅಧ್ಯಕ್ಷರು.—ಮಾನ್ಯ ಮಾದೇಗೌಡರು ಏನೋ ಕ್ಲಾರಿಫಿಕೇಷನ್ ಕೇಳುತ್ತಾರೆ. ಅವರಿಗೆ ಉತ್ತರ ಹೇಳಿಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮುಗಿಸುತ್ತೇನೆ. ಇದನ್ನು ನಾನು ಇವತ್ತು ವಾಪಸ್ ತೆಗೆದುಕೊಳ್ಳುವುದಿಲ್ಲ, ಇದರ ಬಗ್ಗೆ ಚರ್ಚೆ ಆಗಬೇಕು ಈ ಮನೆಯಲ್ಲಿ ಚರ್ಚೆ ಆಗುವುದಕ್ಕಿಂತ ಮುಂಚೆ ಹೊರಗಡೆ ಚರ್ಚೆ ಆಗಬೇಕು. ಇದರ ಬಗ್ಗೆ ಪತ್ರಿಕೆಗಳು ಅಟ್ಯಾಕ್ ಮಾಡಿವೆ ಎಂದು ಅವರು ಹೇಳಿದರು ಇದನ್ನು ವಿರೋಧ ಮಾಡಿವೆ ಎಂದು ಹೇಳಿದರು ಯಾವ ಪ್ರಮುಖ ಪತ್ರಿಕೆಯೂ ಇದನ್ನು ವಿರೋಧ ಮಾಡಿಲ್ಲ. ನಾವು ಇದರ ಬಗ್ಗೆ ಪತ್ರಿಕೆಯ ಅಭಿಪ್ರಾಯ ಏನು ಬಂದಿದೆ ಎಂದು, ಇಷ್ಟಮಾತ್ರಕ್ಕೆ ಅವುಗಳ ಮೇಲೆ ಮುಪ್ಪಾದ ಪ್ರೀತಿ ಮಾಡಿ ನಮ್ಮ ಸದಸ್ಯರಿಗೆ ನಾವು ಅದನ್ನು ಹಂಚಿದ್ದೇವೆ. ಅದನ್ನು ತಾವು ಓದಿರಬಹುದು. ಮಾನ್ಯ ಬಸವಲಿಂಗಪ್ಪನವರು ಇದನ್ನು ಈಗಲೇ ಕೊಡಿಫೈ ಮಾಡತಕ್ಕದ್ದಾ ಏತಕ್ಕೆ ಎಂದು ಹೇಳಿದರು. ಯಾವುದಾದರೂ ಒಂದು ಕಾಲದಲ್ಲಿ ಇದನ್ನು ಮಾಡಲೇ ಬೇಕು ತಾನೆ ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ ಎಂದು ನಮ್ಮ ಸಂವಿಧಾನದಲ್ಲಿ ಇದೆ. ಅದು ಮೂವತ್ತು ವರ್ಷದವರೆಗೆ ಡೈರೆಕ್ಟಿವ್ ಪ್ರಿನ್ಸಿಪಲ್ ಆಗಿತ್ತು. ೧೦ ವರ್ಷದ ಹಿಂದೆ ಅದನ್ನು ಎನ್‌ಫೋರ್ಸಬಲ್ ಎಂದು ಏತಕ್ಕೆ ಮಾಡಿದರು? ಅಲ್ಲಿಯವರೆಗೆ ಏತಕ್ಕೆ ಮಾಡಿಂಲಿಲ್ಲ

ಅದನ್ನು ಯೋಚನೆ ಮಾಡಿದ್ದೀರಾ? ಅದಕ್ಕಾಗಿ ಮೊನ್ನೆಯವರೆಗೆ ಯಾವ ಕೋಡಿಫಿಕೇಷನ್ ಆಗದಿದ್ದರೆ ಅದನ್ನು ಮಾಡಕೂಡದು ಎಂದು ಏನಿಲ್ಲ ನನಗೆ ಒಂದು ನಂಬಿಕೆ ಇದೆ ನಾವು ಇಲ್ಲಿ ಶಾಸನ ಮಾಡತಕ್ಕಂಥವರು. ನಾವು ಬೇರೆಯವರಿಗೆ ಶಾಸನ ಮಾಡುತ್ತೇವೆ. ಇಲ್ಲಿ ವಿಧೇಯಂಕ ರಚನೆ ಮಾಡಿ ಪಾಸ್ ಮಾಡಿ ಕಾಯಿದೆ ಮಾಡುತ್ತೇವೆ. ಯಾರು ಕಾಯಿದೆಯನ್ನು ಮಾಡತಕ್ಕಂಥ ಸ್ಥಾನದಲ್ಲಿ ರುತ್ತೇವೆಯೋ, ಅವರೂ ಕೂಡಾ ಕಾಯಿದೆಗೆ ಒಳಪಟ್ಟಿರಬೇಕು. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದು ಯಾವತರಹದ ಕಾಯಿದೆ ಆಗಿರಬೇಕು ಎಂದು ನೀವೇ ಮಾಡಿ. ಅದನ್ನು ಬೇರೆ ಯಾರೂ ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ ಸ್ವಲ್ಪ ಅವರು ಹೇಳುವುದನ್ನು ಕೇಳಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಇದಕ್ಕೆ ಇಷ್ಟೊಂದು ಹೌಹಾರತಕ್ಕಂಥ ಯಾವುದೇ ಪ್ರಮೇಯ ಇಲ್ಲ. ಚರ್ಚೆಯಾಗಲೀ, ಚರ್ಚೆ ಆದಮೇಲೆ ಸಾಮಾನ್ಯ ಅಭಿಪ್ರಾಯ ಏನು ಬರುತ್ತದೆ ಎಂದು ನೋಡೋಣ. ಪತ್ರಿಕಾ ಬಿಲ್ಲನ್ನು ಪ್ರೆಸ್ ಕೌನ್ಸಿಲ್‌ಗೂ ಕಳುಹಿಸಿಕೊಟ್ಟಿದ್ದೇವೆ, ಎಡಿಟರ್ಸ್ ಗಿಲ್ಡ್‌ಗೂ ಕಳುಹಿಸಿಕೊಟ್ಟಿದ್ದೇವೆ. ನಾವೇನಾದರೂ ಇದನ್ನು ತಂದು ನಿಮ್ಮ ಅಂದರೆ ನಮ್ಮೆಲ್ಲರ ಅಧಿಕಾರವನ್ನು ಹತ್ತಿಕ್ಕಬೇಕು. ಅಭಿಪ್ರಾಯ ಸ್ವಾತಂತ್ರ್ಯ ಕಸಿದುಕೊಳ್ಳಬೇಕು ಎಂಬ ದುರುದ್ದೇಶ ಇದ್ದಿದ್ದರೆ, ಯಾವ ದಿವಸ ನಾವು ಇದನ್ನು ಇಂಟ್ರಡ್ಯೂಸ್ ಮಾಡಿದೆವೋ. ಅದೇ ದಿವಸ ಇದನ್ನು ಪಾಸ್ ಮಾಡಿಕೊಂಡು ಹೋಗಬಹುದಾಗಿತ್ತು. ನಮಗೆ ಆ ಶಕ್ತಿ ಇತ್ತು, ಆದರೆ ಏತಕ್ಕೆ ನಾವು ಮಾಡಲಿಲ್ಲ ? ನಮ್ಮದು ಆ ಉದ್ದೇಶ ಅಲ್ಲ. ಎಷ್ಟೊಂದು ಪ್ರಾಮಾಣಿಕವಾಗಿ ನಾನು ಒಂದು ವಿಚಾರವನ್ನು ನಿಮ್ಮ ಮುಂದಿಟ್ಟರೂ, ಇದಕ್ಕೆ ಇಷ್ಟೊಂದು ದೊಡ್ಡ ಚರ್ಚೆ ಈ ಸಂದರ್ಭದಲ್ಲಿ ಅನಗತ್ಯ ಎಂದು ನನ್ನ ಅಭಿಪ್ರಾಯ. ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಮಾಡೋಣ. ಆದರೆ ಈ ಸಂದರ್ಭದಲ್ಲಿ ಅನಗತ್ಯ ಎಂದು ನನ್ನ ಅಭಿಪ್ರಾಯ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಒಂದು ಪಾಯಿಂಟ್ ಹೇಳಿದ್ದಾರೆ. ಸಾಮಾನ್ಯ ಜನರಿಗೆ ನಾವು ಏನು ಕಾನೂನನ್ನು ಇಲ್ಲಿ ಕುಳಿತುಕೊಂಡು ಮಾಡುತ್ತಿದ್ದೆವೆ ಅದೇ ರೀತಿ ನಮಗೋಸ್ಕರ ಒಂದು ಕಾನೂನು ಮಾಡಿಕೊಳ್ಳುವ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಒಂದು ವಿಚಾರವನ್ನು ತಮ್ಮ ಮುಖಾಂತರ ಅವರ ಮನಕ್ಕೆ ತರುತ್ತಿದ್ದೇನೆ. Common law is different from Special Law. ಕಾಮನ್ ಲಾ ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ. ತಮಗೂ ಕೂಡಾ ಅನ್ವಯಿಸುತ್ತದೆ. ಬೇರೆಯವರಿಗೂ ಅನ್ವಯಿಸುತ್ತದೆ. Special law is for us only. How do you think bout it. It is necessary to have a special law to control the conduct and speeches of MLAs ? Why do you want to bind us ? Procedures are there. Privileges, are them, and so many committees are there. Our conduct is bound by them. I only request him to think over on it.

ಅಧ್ಯಕ್ಷರು. ಮಾನ್ಯ ಮಾದೇಗೌಡರೇ ತಾವು ದಯವಿಟ್ಟು ಕೇಳಿರಿ.

ಶ್ರೀ ಜಿ ಮಾದೇಗೌಡ.—ಒಳ್ಳೆ ಸಂತೋಷ. ಈಗ ತಮ್ಮ ಕಣ್ಣಿಗೆ ಬಿದ್ದಿದ್ದೇನೆ. ಬೆಳಿಗ್ಗೆಯಿಂದ ತಮ್ಮ ಕಣ್ಣಿಗೆ ಬೀಳಬೇಕೆಂದು ಪ್ರಯತ್ನ ಪಡುತ್ತಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಹೇಳುವುದಕ್ಕೆ ಮುಂಚಿತವಾಗಿಯೇ ನನಗೆ ಒಂದರಡು ನಿಮಿಷ ಅವಕಾಶ ಕೊಟ್ಟಿದ್ದರೆ ಮುಖ್ಯಮಂತ್ರಿಗಳು ಇಷ್ಟು ಹೊತ್ತಿಗೆ ಆ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದರು ಅಂದುಕೊಳ್ಳುತ್ತೇನೆ. ಈಗ ಅವರು ಪ್ರತಿಷ್ಠೆಯ ಪ್ರಶ್ನೆಯ ಮೇಲೆ ನಿಂತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಪ್ರತಿಷ್ಠೆ ಏನಿಲ್ಲ.

ಶ್ರೀ ಜಿ. ಮಾದೇಗೌಡ.—ತಪ್ಪೋ ನೆಪ್ಪೋ ಬಿಲ್ಲನ್ನು ಇಟ್ಟಿದ್ದೀರಿ. ಈಗ ವಾಪಸ್ ತೆಗೆದುಕೊಂಡರೆ ನನ್ನ ಪ್ರತಿಷ್ಠೆ ಕಡಿಮೆಯಾಗುತ್ತದೆ ಎಂದು ತಿಳಿದುಕೊಂಡಿದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ನನ್ನ ಸ್ವಂತ ಪ್ರತಿಷ್ಠೆ ಏನಿಲ್ಲ. ಇದು ಪ್ರತಿಷ್ಠೆಯಂ ವಿಚಾರವೂ ಅಲ್ಲ.

ಶ್ರೀ ಜಿ. ಮಾದೇಗೌಡ —ಪ್ರತಿಷ್ಠೇ ಇರುವುದರಿಂದಲೇ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ನಮಗೆಲ್ಲ ಗೊತ್ತಿದೆ ಇಂತಹ ಬಿಲ್‌ಗಳನ್ನು ಅಸೆಂಬ್ಲಿಯಲ್ಲಿ ಇಟ್ಟ ತಕ್ಷಣ ಪಾಸು ಮಾಡಿಕೊಳ್ಳುವುದುಂಟು ಅಥವಾ ಪರ್ಸಾನುಗಟ್ಟಲೆ ಮುಂದುವರಿಸತಕ್ಕಂಥಾದ್ದು ಉಂಟು. ಆದರೆ ಈ ಬಿಲ್ಲನ್ನು ಮಂಡನೆ ಮಾಡಿದ್ದೀರಿ. ಈ ಬಗ್ಗೆ ಅನೇಕ ಪತ್ರಿಕಾತಜ್ಞರು ಹೇಳಿದ್ದಾರೆ, ಕಾನೂನು ಪಂಡಿತರು ಹೇಳಿದ್ದಾರೆ, ಪ್ರತಿಯೊಬ್ಬರು ಹೇಳಿದ್ದಾರೆ, ನಾನು ಮೊದಲೇ ಹೇಳಿದ ಹಾಗೆ ನೀವು ಪ್ರತಿಷ್ಠೆಯ ಮೇಲೆ ನಿಂತಿದ್ದೀರಿ, ಚರ್ಚೆಯಾಗಬೇಕೆಂದು ಹೇಳುತ್ತೀರಿ ಆದರೆ ಚರ್ಚೆಗೆ ಒಪ್ಪಿಕೊಳ್ಳುವುದಿಲ್ಲವಲ್ಲ, ಯಾವಾಗ ಚರ್ಚೆಯಾಗಬೇಕೆನ್ನುವುದು ಸಹ ತಾವು ಹೇಳಲಿಲ್ಲ. ಅದಕ್ಕೆ ನಾವು ಈಗ ಈ ಬಿಲ್ ಬಗ್ಗೆ ಚರ್ಚೆಯಾಗಬೇಕೆಂದೂ ಒಂದು ರೆಸಲೂಷನ್ ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬಿಲ್ ಶಾಸಕರ ಹಕ್ಕು ಚ್ಯುತಿಗೆ ಧಕ್ಕೆಯಾಗುತ್ತಾಗಿದೆ. ಪತ್ರಿಕಾ ಸ್ವಾತಂತ್ರ್ಯಕ್ಕೆ ಚ್ಯುತಿಯಾಗುತ್ತಾಗುತ್ತದೆ. ಈ ಮಸೂದೆ ಒಂದು ಕರಾಳ ಮಸೂದೆ ಎಂದೇ ನಾವು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಹೇಳುತ್ತಾರೆ ಈ ಬಿಲ್ ಚರ್ಚೆಯಾಗಬೇಕೆಂದು ಆದರೆ ಅಧ್ಯಕ್ಷರು ಚರ್ಚೆಗೆ ಅವಕಾಶ ಕೊಡುವುದಿಲ್ಲ ಏಕೆ? ಮಾನ್ಯ ಮುಖ್ಯಮಂತ್ರಿಗಳು ಸ್ವತಂತ್ರ್ಯಕ್ಕಾಗಿ ಹೋರಾಟ ಮಾಡಿದವರು, ಸ್ವಾತಂತ್ರ್ಯಕ್ಕಾಗಿ ಜೈಲುವಾಸ ಅನುಭವಿಸಿರುವವರು, ಪತ್ರಿಕಾ ಸ್ವಾತಂತ್ರ್ಯಕ್ಕಾಗಿ 'ಹೋರಾಟ ಮಾಡಿರುವವರು ಎಮರ್ಜೆನ್ಸಿ ಪಿರಿಯಡ್‌ನಲ್ಲಿ ಜೈಲುವಾಸ ಅನುಭವಿಸಿರುವವರು, ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಡಲು ಹೋರಾಟ ಮಾಡಿದ ವ್ಯಕ್ತಿ ಪ್ರಜಾಪ್ರಭುತ್ವದಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದಕ್ಕೆ ಕರಾಳ ಶಾಸನವನ್ನು ತಂದಿರುವುದು ಸರಿಯಲ್ಲ. ಆದರೂ ಸಹ ಮಾನ್ಯ ಮುಖ್ಯಮಂತ್ರಿಗಳು ಈ ಶಾಸನವನ್ನು ವಾಪಸ್ ತೆಗೆದುಕೊಳ್ಳುವುದಿಲ್ಲವೆಂದು ಪ್ರತಿಷ್ಠೆಯ ಮೇಲೆ ನಿಂತಿದ್ದಾರೆ. ಚರ್ಚೆ ಮಾಡುವುದಕ್ಕಾದರೂ ಏತಕ್ಕೆ ಅವಕಾಶ ಕೊಡಬಾರದು ? ನಾನು ಹೇಳಿದಹಾಗೆ ಪ್ರತಿಷ್ಠೆ ಮೇಲೆ ನಿಂತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿರತಕ್ಕಂಥ ಶಾಸನದಲ್ಲಿ ಸುಮಾರು ೩೦ ಸೆಕ್ಷನ್ಸ್ ಇವೆ. ಈ ಸೆಕ್ಷನ್ಸ್‌ಗಳಲ್ಲಿ ಈಗಾಗಲೇ ಇರುವಂತೆ ಸಣ್ಣಪುಟ್ಟ ಕೆಲಂಗಳು, ಉಳಿದಿರತಕ್ಕಂಥಾವುಗಳು ಎಲ್ಲಾ ಫನಿಶ್‌ಮೆಂಟ್ ಕೊಡತಕ್ಕಂಥ ಕ್ಲಾಜ್‌ಗಳು, ಪೆನಾಲಿಟಿ ಹಾಕತಕ್ಕಂಥ ಕ್ಲಾಸ್‌ಗಳು ಮೆಂಬರ್ಸ್ ಹಕ್ಕನ್ನು ಮೊಟಕುಗೊಳಿಸತಕ್ಕಂಥಾವುಗಳು ಈ ಬಿಲ್ ಒಂದು ರೀತಿ ಫನಿಶ್‌ಮೆಂಟ್ ಬಿಲ್. ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದಿಲ್ಲವೆಂದು ಇದರಲ್ಲಿರತಕ್ಕಂಥ ಸೆಕ್ಷನ್ಸ್ ೨೨, ೨೩, ೨೬, ೨೭ ನೇರವಾಗಿ ಪನಿಶ್ ಮಾಡತಕ್ಕಂಥಾವುಗಳು ಇಲ್ಲಿ ತಾವು ಪ್ರಿಡಂ ಕೊಟ್ಟಿದ್ದೇವೆಂದು ಹೇಗೆ ಹೇಳುತ್ತೀರಿ ? ತಾವು ಪತ್ರಿಕಾರಂಗವನ್ನು ಮೊಟಕುಗೊಳಿಸುವಂತಹ ಬಿಲ್ ತಂದಿದ್ದೀರಿ. ಈ ಬಿಲ್‌ನ್ನು ವಾಪಸ್ ತೆಗೆದುಕೊಳ್ಳಿ ಎಂದು ಎಲ್ಲಾ ಪಕ್ಷದ ಸದಸ್ಯರು ಕೇಳುತ್ತಿದ್ದಾರೆ ನಿಮ್ಮ ಪಕ್ಷದ ಸಭೆಯಲ್ಲಿ ಕೇಳಿದ್ದಾರೆ. ಆದರೂ ಸಹ ಬಿಲ್ ವಾಪಸ್ ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಿದ್ದೀರಿ, ಈ ಬಿಲ್‌ನ್ನು ಸಾರ್ವಜನಿಕರ ಚರ್ಚೆಗೆ ಕಳುಹಿಸಿದ್ದೇನೆ, ಪಾಲ್ಕಿವಾಲಾ ಆ ರೀತಿ ಹೇಳಿದರು, ರಾಂ ಜೇಠ್ಮಲಾನಿಯವರು ಈ ರೀತಿ ಹೇಳಿದ್ದಾರೆಂದು ಸಮರ್ಥನೆಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ. ವಾಪಸ್ ತೆಗೆದುಕೊಳ್ಳುವುದಿಲ್ಲವೆನ್ನುವ ಮನೋದೃಷ್ಟಿಯಿಂದಲಸಹ ಹೇಳಿದ್ದಾರೆ. ಇದನ್ನು ನಾವು ಖಂಡಿಸಿ ಅವರು ವಿತ್‌ಡ್ರಾ ಮಾಡಿಕೊಳ್ಳದೆ ಇರುವುದರಿಂದ ಪ್ರತಿಭಟಿಸಿ ಈ ಸಭೆಯಿಂದ ಹೊರಗಡೆ ಹೋಗುತ್ತೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸಭೆಯಿಂದ ಹೊರಗಡೆ ಹೋದರು)

ಅಧ್ಯಕ್ಷರು —ಇದು ಪರಿಶೀಲನೆಗೆ ತೆಗೆದುಕೊಳ್ಳುವ ವಿಷಯವಾದ್ದರಿಂದ ಮಾನ್ಯ ಸದಸ್ಯರು ಕಳುಹಿಸಿಕೊಟ್ಟಿದ್ದು ರೆಸಲ್ಯೂಶನ್ ಅನ್ನು ನಾನು ತಳ್ಳಿ ಹಾಕಿ ಚರ್ಚೆ ಮಾಡುವುದಕ್ಕೆ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ. ಈಗ ಮಾನ್ಯ ಸದಸ್ಯರಾದ ಶ್ರೀ ವೆಂಕಟರಾಮಯ್ಯನವರು ಮಾತನಾಡಬಹುದು.